ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೫೨ Volume 152	ಬೆಂಗಳೂರು, ಗುರುವಾರ, ಜನವರಿ ೫, ೨೦೧೭ (ಪುಷ್ಯ ೧೫, ಶಕ ವರ್ಷ ೧೯೩೮) Bengaluru, Thursday, January 5, 2017 (Pushya 15, Shaka Varsha 1938)	ಸಂಚಿಕೆ ೧ Issue 1

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

JUSTICE SRI K. N. KESHAVANARAYANA COMMISSION OF INQUIRY

5TH Floor, Cauvery Bhavan,

Karnataka Housing Board Complex,

K.G. Road, Bengaluru-560 009.

NOTIFICATION

No. KNKJ-34/2016, DATED : 05.12.2016

The Government of Karnataka, in exercise of powers conferred under sub-section (1) of Section 3 of Commissions of Inquiry Act, 1952 (Central Act LX of 1952) have constituted Justice K.N.Keshavanarayana Commission of Inquiry as per their Notification bearing No.HD 10 PCE 2016 dated 16.07.2016, to inquire into a definite matter of public importance and submit its report on the following terms of reference:

> "*To inquire into the circumstances and events leading to the unnatural death of Sri M.K. Ganapathy, Dy. SP (Departmental Inquiries), Office of IGP, Western Range, Mangaluru in Room 315, Vinayaka Lodge, Madikeri (Kodagu) on 07.07.2016 and in respect of which UDR No.9/2016 was registered on 07.07.2016 in Town Police Station, Madikeri.*"

As per the above Notification the Government have also authorized the Commission to exercise all the powers under Commissions of Inquiry Act, 1952 and under the Code of Civil Procedure to conduct the inquiry into the above incident.

Wherefore, in exercise of powers conferred under Commissions of Inquiry Act, 1952, Commission of Inquiry (Karnataka) Rules, 1968, those who are interested in the subject matter of terms of reference to submit their grievance, relevant information, if any, to the Commission for proper and complete inquiry of the subject matter referred to above.

Accordingly, all such materials which are relevant for the purpose of inquiry into the above terms of reference may be furnished by way of written submission, authenticating the contents of the same through affidavit duly sworn before the competent person/authority. The written submission shall contain concise information of material facts which are relevant to the above terms of reference and shall avoid argument. The accompanying affidavit shall throw light on the contents of the written statement. If any document has to be produced in support of the written statement and affidavit, the same shall be produced with the signature of the deponent in the document itself regarding its identity along with a list containing the description of the document/s with date (if any). The written statement, affidavit and document/s to be produced shall not only be neat but also be legible. They shall be accompanied with two sets of clearly legible xerox copies duly attested by any competent person.

If any person has to be summoned for examination or for production of document/s in furtherance of such written statement, the deponent shall furnish the name and complete address of such person/s and also details of such document/s to be summoned.

The written statement, affidavit and document/s, if any, may be submitted to the Secretary, Justice Sri K.N.Keshavanarayana Commission of Inquiry or any Officer authorized by the Secretary in that behalf, by personal delivery during the Office hours on a

working day or through registered post acknowledgement due addressed to the Secretary of the above Commission to the address shown above.

Persons filing written statement, affidavits and documents may be required to give evidence before the Commission, if needed, on being summoned on such date, place and time as may be fixed by the Commission of Inquiry. All persons tendering evidence before the Commission of Inquiry would be entitled for protection as per Section 6 of the Commissions of Inquiry Act, 1952.

The Office of the Commission of Inquiry functions on all days except Saturdays and Sundays of the month and the general holidays declared by the State Government. The Office hours of the Commission is from 10.30 a.m. to 4.30 p.m. with lunch break between 1.30 p.m. and 2.00 p.m.

Clarification, if any, may be obtained from the Office of the Commission of Inquiry located in the above address during Office hours on any working day.

The last date for submitting such written statement, affidavits, documents, if any, shall be 12.01.2017.

By order and in the name of the Commission of Inquiry
B. Shivalinge Gowda
Secretary.

ನ್ಯಾಯಮೂರ್ತಿ ಶ್ರೀ ಕೆ.ಎನ್. ಕೇಶವನಾರಾಯಣ ವಿಚಾರಣಾ ಆಯೋಗ

5ನೇ ಮಹಡಿ, ಕಾವೇರಿ ಭವನ, ಕರ್ನಾಟಕ ವಸತಿ ಮಂಡಳಿ ಸಂಕೀರ್ಣ,

ಕೆಂಪೇಗೌಡ ರಸ್ತೆ, ಬೆಂಗಳೂರು – 560 009.

ಅಧಿಸೂಚನೆ

No. KNKJ-34/2016, ದಿನಾಂಕ : 05.12.2016

ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ : ಹೆಚ್.ಡಿ. 10 ಪಿಸಿಇ 2016 ದಿನಾಂಕ: 16.07.2016 ರಲ್ಲಿ ವಿಚಾರಣಾ ಆಯೋಗಗಳ ಅಧಿನಿಯಮ 1952 ರ (ಕೇಂದ್ರ ಅಧಿನಿಯಮ LX ರ 1952) ಕಲಂ. 3 ಕಂಡಿಕೆ (1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಈ ಕೆಳಕಂಡ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಪರಿಶೀಲನಾಂಶಗಳ ವಿಚಾರಣೆ ನಡೆಸಿ, ವರದಿ ಸಲ್ಲಿಸಲು ನ್ಯಾಯಮೂರ್ತಿ ಶ್ರೀ ಕೆ.ಎನ್. ಕೇಶವನಾರಾಯಣ ವಿಚಾರಣಾ ಆಯೋಗ ರಚಿಸಿದೆ:–

"ಶ್ರೀ ಎಂ.ಕೆ. ಗಣಪತಿ. ಡಿವೈಎಸ್ಪಿ, (ಇಲಾಖಾ ವಿಚಾರಣೆ), ಐಜಿಪಿ ಕಛೇರಿ, ಪಶ್ಚಿಮ ವಲಯ, ಮಂಗಳೂರು ಇವರು ಮಡಿಕೇರಿಯ ವಿನಾಯಕ ಲಾಡ್ಜ್‌ನ ಕೊಠಡಿ ಸಂಖ್ಯೆ: 315 ರಲ್ಲಿ 07.07.2016 ರಂದು ಅಸ್ವಾಭಾವಿಕವಾಗಿ ಮರಣ ಹೊಂದಿದ್ದು, ಇದಕ್ಕೆ ಕಾರಣವಾದ ಸಂದರ್ಭಗಳು ಹಾಗೂ ಘಟನೆಗಳ ಕುರಿತು ಮತ್ತು ಈ ಸಂಬಂಧ ಮಡಿಕೇರಿಯ ನಗರ ಪೊಲೀಸ್ ಠಾಣೆಯಲ್ಲಿ ದಿನಾಂಕ 07.07.2016 ರಂದು ದಾಖಲಾಗಿರುವ ಯುಡಿಆರ್ ನಂ. 9/2016 ಕುರಿತು ವಿಚಾರಣೆ ನಡೆಸುವುದು

ಮೇಲ್ಕಾಣಿಸಿದ ಅಧಿಸೂಚನೆಯಂತೆ ಸರ್ಕಾರವು ವಿಚಾರಣಾ ಆಯೋಗಗಳ ಅಧಿನಿಯಮ 1952 ಮತ್ತು ಸಿವಿಲ್ ಪ್ರಕ್ರಿಯೆ ಸಂಹಿತೆ 1908 ಅಡಿಯಲ್ಲಿ ಅಧಿಕಾರ ಚಲಾಯಿಸಿ ಮೇಲ್ಕಂಡ ಘಟನೆಯ ಬಗ್ಗೆ ವಿಚಾರಣೆ ನಡೆಸಲು ಸರ್ಕಾರ ಈ ಆಯೋಗಕ್ಕೆ ಅಧಿಕಾರ ನೀಡಿದೆ.

ಕಾರಣ, ವಿಚಾರಣಾ ಆಯೋಗಗಳ ಅಧಿನಿಯಮ 1952, ವಿಚಾರಣಾ ಆಯೋಗ (ಕರ್ನಾಟಕ) ನಿಯಮಗಳು 1968ರ ಅಡಿಯಲ್ಲಿ ಅಧಿಕಾರ ಚಲಾಯಿಸಿ, ಪರಿಶೀಲನಾಂಶಗಳಿಗೆ ಸಂಬಂಧಪಟ್ಟಂತೆ, ಹಿತಾಸಕ್ತಿವುಳ್ಳವರಿಂದ ಕುಂದುಕೊರತೆಗಳು ಹಾಗೂ ಮಾಹಿತಿ, ದಾಖಲಾತಿ ಇದ್ದಲ್ಲಿ ಆಯೋಗಕ್ಕೆ ಸಲ್ಲಿಸಿದರೆ, ಮೇಲ್ಕಂಡ ವಿಚಾರಣೆಯನ್ನು ಸೂಕ್ತ ರೀತಿಯಲ್ಲಿ ಮತ್ತು ಪೂರ್ತಿಯಾಗಿ ಕೈಗೊಳ್ಳಲು ಸಹಕಾರವಾಗುವುದು.

ತದನುಸಾರವಾಗಿ ಮೇಲಿನ ಪರಿಶೀಲನಾಂಶಗಳ ಬೆಳಕಿನಲ್ಲಿ ವಿಚಾರಣೆಯ ಉದ್ದೇಶಕ್ಕೆ ಪ್ರಸಕ್ತವಾದ ಎಲ್ಲಾ ಸಂಗತಿಗಳನ್ನು ಲಿಖಿತ ಹೇಳಿಕೆ (Writen Statement) ರೂಪದಲ್ಲಿ ಮತ್ತು ಅದರ ಸಮರ್ಥನೆಗಾಗಿ ಸಕ್ಷಮ ಪ್ರಾಧಿಕಾರ/ವ್ಯಕ್ತಿಯ ಮುಂದೆ ಯುಕ್ತವಾಗಿ ಶಪಥ ಪತ್ರ (Affidavit) ಸಹಿತ ದಾಖಲಾತಿಗಳ ಜೊತೆಗೆ (ದಾಖಲಾತಿಗಳು ಇದ್ದಲ್ಲಿ) ಆಯೋಗಕ್ಕೆ ಸಲ್ಲಿಸಬಹುದಾಗಿದೆ. ಲಿಖಿತ ಹೇಳಿಕೆಯಲ್ಲಿ ಪರಿಶೀಲನಾಂಶಗಳಿಗೆ ಪ್ರಸಕ್ತವಾಗಿರುವ ಯಾವುದೇ ಮುಖ್ಯ ಸಂಗತಿಗಳು ಕಂಡಿಕೆ (paragraph) ಗಳಾಗಿ ಸಂಕ್ಷಿಪ್ತವಾದ ನಿರೂಪಣೆಯನ್ನು ಒಳಗೊಂಡಿರತಕ್ಕದ್ದು ಮತ್ತು ವಾದರಹಿತವಾಗಿರತಕ್ಕದ್ದು. ಪೂರಕವಾಗಿ ಸಲ್ಲಿಸಲಾಗುವ ಶಪಥ ಪತ್ರವು ಲಿಖಿತ ಹೇಳಿಕೆಯಲ್ಲಿ ನಿರೂಪಿಸಿರುವ ಸಂಗತಿಗಳ ಮೇಲೆ ಬೆಳಕು ಚೆಲ್ಲತಕ್ಕದ್ದು. ಲಿಖಿತ ಹೇಳಿಕೆ ಮತ್ತು ಶಪಥ ಪತ್ರದ ಜೊತೆ ಸಲ್ಲಿಸುವ ದಾಖಲಾತಿಗೆ ಶಪಥ ಪತ್ರ ಮಾಡಿದವರು ತಮ್ಮ ಗುರುತಿನ ಬಗ್ಗೆ ಸಹಿ ಮಾಡತಕ್ಕದ್ದು ಮತ್ತು ದಾಖಲಾತಿಗೆ ದಿನಾಂಕವಿದ್ದಲ್ಲಿ ಅದನ್ನು ದಾಖಲಾತಿ ಪಟ್ಟಿಯಲ್ಲಿ ದಾಖಲೆಯ ವಿವರಣೆಯೊಂದಿಗೆ ನಮೂದಿಸತಕ್ಕದ್ದು. ಹಾಜರುಪಡಿಸಲಾಗುವ ಲಿಖಿತ ಹೇಳಿಕೆ, ಶಪಥ ಪತ್ರ ಮತ್ತು ದಾಖಲಾತಿಯು ಓರಣವಾಗಿದ್ದು ಸ್ಪಷ್ಟವಾಗಿರತಕ್ಕದ್ದು. ಅಂತಹ ಲಿಖಿತ ಹೇಳಿಕೆ, ಶಪಥ ಪತ್ರ ಮತ್ತು ದಾಖಲಾತಿಗಳು ಯಾರೇ ಸಕ್ಷಮ ವ್ಯಕ್ತಿಯಿಂದ ಯುಕ್ತವಾಗಿ ದೃಢೀಕರಿಸಿದ ಎರಡು ನೆರಳಚ್ಚು (Xerox) ಪ್ರತಿಗಳನ್ನೊಳಗೊಂಡಿರತಕ್ಕದ್ದು. ಅಂತಹ ಲಿಖಿತ ಹೇಳಿಕೆ, ಶಪಥ ಪತ್ರಕ್ಕೆ ಸಂಬಂಧಪಟ್ಟಂತೆ ಯಾರನ್ನೇ ಆದರೂ ವಿಚಾರಣೆಗಾಗಿ ಅಥವಾ ದಾಖಲಾತಿಯನ್ನು ಹಾಜರುಪಡಿಸುವುದಕ್ಕಾಗಿ ಕರೆ ("ಸಮನ್ಸ್") ಮಾಡಬೇಕಾದಲ್ಲಿ, ಹೇಳಿಕೆದಾರರು ಅಂತಹ ವ್ಯಕ್ತಿ/ವ್ಯಕ್ತಿಗಳ ಹೆಸರು ಮತ್ತು ವಿಳಾಸ, ಕರೆ ("ಸಮನ್ಸ್") ಮಾಡಬಹುದಾದ ದಾಖಲಾತಿ, ದಸ್ತಾವೇಜುಗಳ ವಿವರಗಳನ್ನು ಸಹಾ ಒದಗಿಸತಕ್ಕದ್ದು.

ಶಪಥ ಪತ್ರ ಮತ್ತು ದಾಖಲಾತಿಗಳನ್ನು (ದಾಖಲಾತಿಗಳು ಇದ್ದಲ್ಲಿ) ಒಳಗೊಂಡ ಲಿಖಿತ ಹೇಳಿಕೆಯನ್ನು ಆಯೋಗದ ಕಾರ್ಯದರ್ಶಿಯವರಿಗೆ ಅಥವಾ ಅವರ ಪರವಾಗಿ ಕಾರ್ಯದರ್ಶಿಯವರಿಂದ ನಿಯುಕ್ತರಾದ ಯಾರೇ ಇತರ ಅಧಿಕಾರಿ ಸಿಬ್ಬಂದಿಗೆ ಎಲ್ಲಾ ಕೆಲಸದ ದಿನಗಳಂದು ಕಛೇರಿಯ ಕೆಲಸದ ಸಮಯದಲ್ಲಿ ಅಥವಾ ಮೇಲೆ ತೋರಿಸಿದ ವಿಳಾಸಕ್ಕೆ ಆಯೋಗದ ಕಾರ್ಯದರ್ಶಿಯವರಿಗೆ ಅಂಚೆ ತಲುಪೋಪ್ಪಿಗೆಯೊಂದಿಗೆ ನೊಂದಾಯಿತ ಅಂಚೆಯ ಮೂಲಕ ಸಲ್ಲಿಸಬಹುದಾಗಿದೆ.

ಒಂದಾವರ್ತಿ ಲಿಖಿತ ಹೇಳಿಕೆ, ಶಪಥ ಪತ್ರ ಮತ್ತು ದಾಖಲಾತಿ ಸಲ್ಲಿಸುವ ವ್ಯಕ್ತಿಯು ಸಾಕ್ಷ್ಯ ನೀಡಬೇಕಾದಲ್ಲಿ ಕರೆ ("ಸಮನ್") ಮಾಡಲಾದ ದಿನಾಂಕದಂದು ಮತ್ತು ಸಮಯಕ್ಕೆ ಬೆಂಗಳೂರು ಅಥವಾ ಆಯೋಗದಿಂದ ನಿಗಧಿ ಪಡಿಸಬಹುದಾದ ಯಾವುದೇ ಇತರ ಸ್ಥಳದಲ್ಲಿ ಆಯೋಗದ ಮುಂದೆ ಸಾಕ್ಷ್ಯ ನೀಡತಕ್ಕದ್ದು ಮತ್ತು ಅಂತಹ ಸಾಕ್ಷ್ಯ ನೀಡುವ ಎಲ್ಲಾ ವ್ಯಕ್ತಿಗಳು ವಿಚಾರಣಾ ಆಯೋಗಗಳ ಅಧಿನಿಯಮ 1952 ರ 6 ನೇ ಕಲಂನ ಮೇರೆಗೆ ರಕ್ಷಣೆಗೆ ಹಕ್ಕುಳ್ಳವರಾಗಿರುತ್ತಾರೆ.

ವಿಚಾರಣಾ ಆಯೋಗವು ತಿಂಗಳಿನ ಎಲ್ಲಾ ಶನಿವಾರ ಮತ್ತು ಭಾನುವಾರಗಳು ಹಾಗೂ ರಾಜ್ಯ ಸರ್ಕಾರದಿಂದ ಘೋಷಿಸಲಾದ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ ಉಳಿದೆಲ್ಲಾ ದಿನಗಳಂದು ಕಾರ್ಯ ನಿರ್ವಹಿಸುತ್ತದೆ. ಆಯೋಗದ ಕಛೇರಿಯ ಅವಧಿಯು ಬೆಳಿಗ್ಗೆ 10.30 ಘಂಟೆಯಿಂದ ಸಂಜೆ 4.30 ಘಂಟೆಯವರೆಗಿದ್ದು ಮಧ್ಯೆ 1.30 ರಿಂದ 2.00 ರ ವರೆಗೆ ಊಟದ ಬಿಡುವಿನ ಅವಧಿಯಾಗಿರುತ್ತದೆ.

ಈ ಸಂಬಂಧದಲ್ಲಿ ಏನಾದರೂ ಸ್ಪಷ್ಟೀಕರಣ ಬೇಕಿದ್ದಲ್ಲಿ ಮೇಲೆ ಹೇಳಲಾಗಿರುವ ಆಯೋಗದ ಕಛೇರಿಯಲ್ಲಿ ಯಾವುದೇ ಕೆಲಸದ ದಿನದಂದು ಕಛೇರಿಯ ಕೆಲಸದ ಅವಧಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಮೇಲೆ ಪ್ರಸ್ತಾಪಿಸಿದ ಲಿಖಿತ ಹೇಳಿಕೆ, ಶಪಥ ಪತ್ರ ಮತ್ತು ದಾಖಲಾತಿಗಳನ್ನು ಆಯೋಗಕ್ಕೆ ಸಲ್ಲಿಸಲು ಕೊನೆಯ ದಿನಾಂಕ 12.01.2017 ಆಗಿರುತ್ತದೆ.

P.R. 928

SC-50

ವಿಚಾರಣಾ ಆಯೋಗದ ಆಜ್ಞಾನುಸಾರ ಮತ್ತು ವಿಚಾರಣಾ ಆಯೋಗದ ಹೆಸರಿನಲ್ಲಿ

ಕಾರ್ಯದರ್ಶಿ,

ನ್ಯಾಯಮೂರ್ತಿ ಶ್ರೀ ಕೆ.ಎನ್. ಕೇಶವನಾರಾಯಣ

ವಿಚಾರಣಾ ಆಯೋಗ.

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ :ಇಡಿ 252 ಯುಆರ್‌ಸಿ 2016, ಬೆಂಗಳೂರು, ದಿನಾಂಕ: 12–12–2016

ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ : 47)ರ 1ನೇ ಪ್ರಕರಣದ (3)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮವು ದಿನಾಂಕ 12ನೇ ಡಿಸೆಂಬರ್ 2016 ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎ. ಅಹಮದ್ ಜಾನ್

ಸರ್ಕಾರದ ಅಧೀನ ಕಾರ್ಯದರ್ಶಿ

ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು–2)

EDUCATION SECRETARIAT

NOTIFICATION

NO. ED 252 URC 2016, BENGALURU, DATE: 12-12-2016

Whereas, the Garden City Education Trust, Bengaluru has submitted the proposal to Government requesting to grant Private University status to be named as Garden City University.

Whereas, the Government has referred the same to the Karnataka State Higher Education Council to inspect the Institution about its infrastructure etc., and submit its report to Government.

Whereas, the Karnataka State Higher Education Council has submitted its report. Based on the report of the Committee, Government has prepared draft Garden City University Bill and placed it before the Karnataka Legislature for its approval. After obtaining the approval of the Legislature and assent of Hon'ble Governor of Karnataka, Garden City University Act, 2013 was published in the Official Gazette dated: 12-04-2013 and it was given effect from **12th December 2016** as published in the Official Gazette.

Whereas, as per Section 3 of Garden City University Act, 2013, the Garden City Education Trust, has submitted the proposal to Government for establishment of the Garden City University. Accordingly, Government of Karnataka has constituted a Committee vide its order No. ED 252 URC 2016, dated: 01-08-2016 to inspect the physical infrastructure available with Garden City Education Trust and to submit its report in terms of Section 3(3) of the said Act.

Whereas, the Committee constituted for the purpose, visited the Garden City Education Trust, Bengaluru campus and also the land earmarked to establish its University campus at Yalachahalli, Hosakote Taluk, Bengaluru District on 05-10-2016 and 06-10-2016 and after due inspection submitted its report to Government on 19-10-2016 on the issues as contained in Clauses (i) to (xiii) of Section 3(3) the Garden City University Act, 2013.

Whereas, the Garden City Education Trust has created Statutory Fund of Rs.15.00 crores (Rupees Fifteen Crores only) as stipulated under Section 4 read with proviso to Section 47 of the Garden City University Act, 2013.

Now, therefore, after considering all the facts, Government of Karnataka has accorded approval with the following terms and conditions to Garden City Education Trust, Bengaluru in accordance with Section 4(2) of Garden City University Act, 2013 to establish and commence a Private University in the name and style "Garden City University" at Garden City College campus, Bengaluru.

1. The Garden City Education Trust shall have the right to establish the University of Unitary Nature subject to and in accordance with the provisions of this Act.
2. Since the University is being located at Bengaluru District i.e. within Bengaluru Metropolitan Region Development Authority Area, the University shall establish a permanent Statutory Endowment Fund of Rs.15.00 Crores, out of which Rs.10.00 Crores shall be deposited in cash which shall be operated by the University with the joint signature of the Additional Chief Secretary/Principal Secretary to Government and remaining amount of Rs.5.00 Crores shall be in the form of Bank Guarantee.
3. The nature and functions of the University shall be strictly as per the provisions of Garden City University Act, 2013. It shall also comply the rules that will be made under the Act in due course. The University shall also comply all the prevailing relevant laws, which concern the governance of the University in any aspect.
4. Agenda matters shall be dealt as per section 2(b) of the Act.
5. "Statutes" and "Regulations" of the University under the Act shall be made within a period of 3 months from the date of this Notification.
6. The University is permitted to start the following courses in the campus, only after ensuring that necessary faculty is recruited and requisite infrastructure such as lab etc. is provided as per UGC Guidelines:-

Sl. No.	**Programs/Courses**
A	**School of Science and Technology**
1	B.Sc. Physics, Chemistry & Mathematics
2	B.Sc. Biotechnology, Biochemistry and Genetics
3	B.Sc. Basic Sciences / Aircraft Maintenance
4	B.Sc. Honors programs in various subjects / Textile
5	B.Sc. Food Science
6	B.Sc. Nanotechnology
7	B. Sc Electronics, Mathematics & Physics
8	B.Sc. Chemistry, Botany & Zoology
9	B.Sc. with Statistics, Computer Science & Mathematics
10	B.Sc. Chemistry Honours
11	B.Sc. Forensic Science
12	B.Sc. Dairy Science and Technology
13	B.Sc. Toxicology
14	B.Sc. Poison Analysis
15	Bachelor of Science (BS) program - 4 year (8 semesters) with research orientation in areas of Biological, Material, environmental sciences
16	B.Sc. Clinical Research and Healthcare Management
17	PG Diploma in Pharmacovigilance
18	M.Sc. Mathematics
19	M.Sc. Food Science
20	M.Sc. Genetics
21	M.Sc. Clinical Research & Pharmacovigilance
22	M.Sc. Applied Mathematics
23	M.Sc. Physics
24	M.Sc. Statistics
25	M.Sc. Chemistry
26	M.Sc. Organic Chemistry

Sl. No.	Programs/Courses
27	M.Sc. Botany
28	M Sc Biotechnology
29	M.Sc. Microbiology
30	M.Sc. Biochemistry
31	M.Sc. Nanotechnology
32	M.Sc. Dairy Science and Technology
33	Master of Forensic Science
34	Master of Food Technology
35	Master of Toxicology
36	Master of Science (MS) program - 2 year with research orientation in the areas of Biological, Material and environmental sciences / Stem Cell Technology
37	Integrated Programs
38	Integrated/Dual Master's Program (BS+MS) 5 Years
39	M.Phil.
40	Ph.D.
B	**School of Professional Studies**
1	B Tech Railway Engineering
2	Bachelor in Design (B. Des) (4 yrs.)
3	Bachelor of Hotel Management
4	B.Sc. - Interior Design
5	B.Sc. Fashion & Apparel Design
6	BA Tourism
7	B.Sc. Catering
8	BA Tourism and Event Management
9	B.ED
10	B.ED-(Special Education)
11	LLB / BA LLB / BBA LLB / BCom LLB
12	LLB (Cyber law)
13	LLB (Corporate law)
14	LLB (Patenting)
15	PG Diploma
16	MBA Aviation Management
17	MBA Health Care Management
18	MBA Agricultural Marketing / Agricultural Management
19	MBA Farm Management
20	MBA Executive Leadership
21	MBA Valuation / Investment Banking
22	MBA Entrepreneurship Management
23	Masters in Fashion Design

Sl. No.	Programs/Courses
24	Master in Professional Studies
25	MBA in Real Estate Management / Sports Management
26	M.Sc. in Political Marketing/Analysis/Political Campaign Management
27	M.Sc. in Regional Urban Planning
28	Master in Design (2 Yrs)
29	MBA Logistics Management / NGO Management
30	MTA
31	Master of Hospitality Management
32	Master of Food Service Management
33	MBA Marketing / International Management
34	MBA HR
35	MBA IT
36	MBA Hospital and Healthcare Management
37	MBA Banking and Finance
38	Master of Rooms Division Management
39	Master of Hospitality, Finance & Marketing
40	M L I Sc(Master of Library Information Science)
41	MBA Insurance and Actuarial Sciences
42	Master of Hotel Management
43	Master of Political Management
44	Master of Waste Management Techniques
45	Master of Hospital Administration
46	LLM in general, cyber law, corporate law, patenting
47	M.Phil.
48	Ph.D.
C	**School of Engineering and Technology**
1	B.E Architecture
2	B.E Biotechnology
3	B.E Civil Engineering
4	B.E. Construction Technology & Management
5	B.E Electronics & Communication
6	B.E. Electrical and Electronics
7	B.E Mechanical Engineering
8	Bachelor of Technology in i. Civil Engineering ii. Mechanical Engineering iii. Agricultural Engineering. iv. Mechatronics v. Textile Technology vi. Electrical Engineering vii. Electronic Engineering viii. Instrumentation,etc.

Sl. No.	Programs/Courses
9	B.E+M. Tech (5 years Integrated)
10	B.E +MBA (5 Years Integrated)
11	M. Tech in ten emerging areas of Engineering Technology
12	M. Arch
13	M.E/M Tech in Aerospace Engineering
14	M. Tech in Aviation Engineering
15	M.E/M Tech in Automotive Engineering
16	M. Tech in Advanced Embedded Systems
17	M. Tech in Advanced Power Electronics
18	M. Tech in Biotechnology
19	M.E/M Tech in Bioinformatics
20	M. Tech in Civil Engineering
21	M Tech in Computer Aided Structural Engineering
22	M. Tech in Electrical and Electronic Engineering
23	M.E/M Tech in Manufacturing Science & Engineering
24	M.E/M Tech in Microelectronics & Control Systems
25	M. Tech in Mechanical Engineering.
26	M.E/M Tech in Organic Farming
27	M. Tech in Railway Engineering
28	M. Tech in Structural Engineering
29	M.Phil.
30	Ph.D.
D	**School of Management and Commerce**
1	B.Com-(Industry Integrated)
2	Bachelor of Business Management (BBM)
3	BBM-(Industry Integrated) / International Relations
4	BBA, BBA Logistics Management / Aviation Management
5	M.Com
6	MBA (Techno-Administration and Engineering Management) (Post BE/B Tech)
7	Executive Master Business Administration (Executive MBA)
8	Integrated Master's Program (BBM+MBA) 4 Years
9	Integrated/Dual degree program (BE+MBA) 5 years in Computer Science and Management
10	Post Graduate Diploma in Management (PGDM)
11	M.Phil.
12	Ph.D.
E	**School of Social Sciences and Humanities**
1	BA English, Psychology and Journalism
2	BA Public Administration

Sl. No.	Programs/Courses
3	BA Public Policy
4	BA Liberal Arts
5	BSW
6	B A Sociology and Criminology.
7	B A History and Economics
8	BA Political Science / Anthropology
9	B A Economics, Sociology and Psychology
10	BA Civil services
11	BA Hons Tourism
12	BA Hons Journalism
13	BA Hons Multimedia & Mass Communication
14	MA Peace and Conflict Studies
15	MSW
16	MA in Communicative English
17	MA in Communication and Journalism
18	MA Mass Communication
19	MA Economics
20	MA Sociology
21	MA in Leadership studies
22	MA in Civil services
23	MA Public Policy
24	MA Psychology
25	MA Public Administration
26	Master of Humanities and Social Sciences.
27	MA History
28	MA Political Science
29	LLM
30	M.Phil.
31	Ph.D.
F	**School of Computational Sciences and Information Technology**
1	BCA
2	B.Sc. IT / Graphic Design
3	B.Sc. Visual Effects and Game Design
4	B.Sc. Computer Science
5	B.Sc. Animation
6	B. Tech Robotic Engineering
7	B. Tech Computer Science
8	BE Computer Science

Sl. No.	Programs/Courses
9	B.E. Information Science
10	B. Tech Information Technology.
11	Master of Computer Applications
12	M.Sc. IT
13	M Sc Computer Science
14	M Sc Animation
15	ME/M Tech in Computer Science and Engineering
16	M Tech in Computer Networking
17	ME/M Tech in Cyber Forensics and Information Security
18	ME/M Tech in Digital Electronics and Communication Systems
19	ME/ M Tech in Intelligent Systems
20	M. Tech in Information Technology
21	M. Tech in Robotics and Robotic Engineering
22	M Tech in VLSI and Embedded Systems
23	M Tech in Wireless Communication & Networking
24	Integrated MCA (5 Years)
25	M.Phil.
26	Ph.D.
G	**School of Physical Education and Sports**
1	B.Sc. Health & Fitness
2	BP Ed
3	Master of Sports Management
4	MP Ed
5	M.Phil.
6	Ph.D.
H	**School of Fine and Performing Arts**
1	Bachelor of Performing Arts
2	BFA (Fine Arts)
3	BFA (Commercial)
4	Diploma in Classical Art forms
5	Diploma in Painting
6	Master in Performing Arts (Drama)
7	Master in Performing Arts (Dance)
8	MA in Music
9	M.Phil.
10	Ph.D.
I	**School of Indian and Foreign Languages**
1	BA English
2	BA Kannada

Sl. No.	Programs/Courses
3	BA Hindi
4	Diploma in French
5	Diploma in German
6	Diploma in Mandarin
7	Diploma in Japanese
8	Diploma in Spanish
9	MA English
10	MA Kannada
11	MA Hindi
12	M.Phil.
13	Ph.D.
J	**School of Health Sciences**
1	BPT
2	BDS
3	BAMS
4	BASLP
5	B.Sc. Nursing
6	D Pharm
7	B Pharma
8	M Pharma
9	Pharm D
10	MBBS
11	MD Medicine
12	MD Surgery
13	MD Physiotherapy
14	MD Pharmacology
15	MD Cardiology
16	MD Nursing
17	MD Clinical Instrumentation
18	MD Pharmacy
19	MD Dietetics
20	MD Clinical Research
21	MD Speech and Hearing
22	MPT
23	MDS
24	M.Sc. Nursing
25	M.Phil.
26	Ph.D.

Sl. No.	Programs/Courses
K	**School of Media Studies**
1	BA Electronic Media / Journalism / Cinematography
2	BA Hons Media Studies
3	BA New Media
4	B.Sc. Visual Communication
5	MA Journalism and Mass communication
6	MA Electronic Media
7	M.Phil.
8	Ph.D.

7. As per section 4(3) and 6 of the Act, the University is not allowed to affiliate any other existing colleges of its own management till completion of five years and those colleges shall continue to be affiliated to the existing respective regular Universities. The constituent colleges, additional campuses, Regional Centres or Study Centres can only be established after five years from the date of commencement of the University with the prior permission of the state Government and shall be as per the norms of UGC and other National Accreditation bodies.
8. As per section 4(7) of the Act the property of the University shall be used for the purpose and objects of the University only.
9. The Trust shall possess land to an extent at least forty acres.
10. The University shall always strive to achieve Global Standards and shall promote research and all progressive academic activities vigorously as per Section 7 of the Act.
11. The fees and other charges that may be collected by the University shall be as per the Statutes and rules as per section 8(v). Further provisions of section 38 of the Act regarding the Fee Regulation Committee shall be complied with.
12. The reservations in admissions shall be as per section 9 of the Act.
13. National Accreditations shall be sought from respective statutory bodies as per section 10 of the Act.
14. The directions of the Visitor to the University i.e. the Hon'ble Governor of Karnataka shall be complied by the University as and when they are issued.
15. All the statutory bodies and statutory functions are to be complied by the University well in time as per Act.
16. The periodical statutory reports shall be submitted to Government as per provisions of the Act.
17. The University shall prepare annual accounts as per section 53 of the Act and also the audit of the University shall be taken up as per sub section 2 of 53 of the Act.
18. The University shall place the annual accounts and audit reports before the Board of Governors before 30th November every year.
19. The Board of Governors shall send the annual accounts along with the annual reports and audit reports before 31st December every year to the Government.

By Order and in the name of Governor of Karnataka

M.A. AHAMED JHON

Under Secretary to Government

Higher Education Department (Universities-2).

PR. 929

SC. 50

ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಾರಿಇ : 109 : ಸ್ವೀರಸ 2016, ಬೆಂಗಳೂರು, ದಿನಾಂಕ : 24.08.2016.

ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕರಣ 4(1) (ಎ) ಮತ್ತು 4(1)(ಬಿ) (2005 ರ ಕೇಂದ್ರ ಅಧಿನಿಯಮ ಸಂಖ್ಯೆ (22) ರ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, 2015–16 ನೇ ಸಾಲಿಗೆ ಕರ್ನಾಟಕ ಸರ್ಕಾರ ಸಚಿವಾಲಯದ ಸಾರಿಗೆ ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ಅನುಬಂಧಿಸಿ ಜನಸಾಮಾನ್ಯರ ಮಾಹಿತಿಗಾಗಿ ಈ ಕೆಳಕಂಡಂತೆ ಪ್ರಕಟಿಸಲಾಗುತ್ತಿದೆ.

ಸದರಿ ಮಾಹಿತಿಗಳು ಇಲಾಖೆಯ ವೆಬ್‌ಸೈಟ್ www.karnataka.gov.in/transport:secretariat/ ರಲ್ಲಿಯೂ ಸಹ ಲಭ್ಯವಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಬೀರೇಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಾರಿಗೆ ಇಲಾಖೆ.

ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ 4(1) (ಬಿ)ರ ಪಾಲನೆಗೆ ಸಂಬಂಧಿಸಿದಂತೆ ಮಾಹಿತಿ

4(ಬಿ) (i) ಸಾರಿಗೆ ಇಲಾಖೆಯ (ಕರ್ನಾಟಕ ಸರ್ಕಾರದ ಸಚಿವಾಲಯ) ಅಧಿಕಾರ ಮತ್ತು ಕರ್ತವ್ಯಗಳ ವಿವರಗಳು :

ಸಾರಿಗೆ ಸಚಿವಾಲಯದ ವ್ಯವಹಾರಗಳನ್ನು ಈ ಮುಂದಿನ ಶಾಖೆಗಳ ಮೂಲಕ ಅಂದರೆ,

1) ರಾಜ್ಯ ಸಾರಿಗೆ ಉದ್ಯಮಗಳ ಶಾಖೆ.
2) ಮೋಟಾರು ವಾಹನಗಳ ಶಾಖೆ.
3) ಆಂತರಿಕ ಆರ್ಥಿಕ ಸಲಹೆಗಾರರು.
4) ಕಾನೂನು ಕೋಶ–ಇವುಗಳ ಮೂಲಕ ನಡೆಸಲಾಗುತ್ತದೆ.

ಸಾರಿಗೆ ಸಚಿವಾಲಯದ ಅಧೀನದಲ್ಲಿ, ಸಾರಿಗೆ ಇಲಾಖೆ, ಆಯುಕ್ತರ ಕಛೇರಿ ಮತ್ತು ನಾಲ್ಕು ರಾಜ್ಯ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ ಲಿ., (ಡಿಡಿಯುಟಿಟಿಎಲ್) ಎಂದು ಕರೆಯಲಾಗುವ ಒಂದು ಟ್ರಕ್ ಟರ್ಮಿನಲ್ ಅನ್ನು ಹೊಂದಿದೆ.

ಸಾರಿಗೆ ಸಚಿವಾಲಯವು ಸಾರಿಗೆ ವಿಷಯ ಮಾರ್ಗಸೂಚಿಗಳಿಗೆ ಸಂಬಂಧಿಸಿದ ಸೂಚನೆ ಮುಂತಾದವುಗಳನ್ನು ಹೊರಡಿಸುತ್ತದೆ.

ಸಾರ್ವಜನಿಕ ಉದ್ದೇಶವನ್ನು ಹೊಂದಿರುವ ಸರ್ಕಾರಿ ನೀತಿಗಳು, ಧ್ಯೇಯೋದ್ದೇಶಗಳನ್ನು ಸಾರಿಗೆ ಸಚಿವಾಲಯದ ಮೂಲಕ ನಿರ್ವಹಿಸಲಾಗುತ್ತದೆ ಮತ್ತು ಅವುಗಳನ್ನು ಸಾರಿಗೆ ಇಲಾಖೆಯ ಮೂಲಕ ಹಾಗೂ ಐದು ರಾಜ್ಯ ಸಾರಿಗೆ ಉದ್ದಿಮೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.

ಸಾರಿಗೆ ಇಲಾಖೆಯು ಅನುಷ್ಠಾನಗೊಳಿಸಬೇಕಾದ ಹೊಸ ಯೋಜನಾ ಕಾರ್ಯಕ್ರಮಗಳಿಗೆ ಸಾರಿಗೆ ಇಲಾಖೆಯಲ್ಲಿ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಅನುಷ್ಠಾನಗೊಳಿಸಲಾಗುವುದು.

ಸಾರಿಗೆ ಸಚಿವಾಲಯದಲ್ಲಿನ ಪ್ರಕಾರ್ಯಗಳನ್ನು ಈ ಮುಂದಿನ ಅಧಿನಿಯಮಗಳು ಮತ್ತು ನಿಯಮಗಳಿಗೆ ಅನುಸಾರವಾಗಿ ಆಚರಣೆಗೆ ತರಲಾಗುತ್ತಿದೆ.:–

1) **ಕೇಂದ್ರ ಮೋಟಾರು ವಾಹನ ಅಧಿನಿಯಮ, 1988 ಮತ್ತು ನಿಯಮಗಳು**
2) **ಕರ್ನಾಟಕ ಮೋಟಾರು ವಾಹನ ನಿಯಮಗಳು, 1989.**
3) **ಕೇಂದ್ರ ಮೋಟಾರು ವಾಹನ ತೆರಿಗೆ ನಿರ್ಧರಣೆ, ಅಧಿನಿಯಮಗಳು, 1957.**
4) **ರಸ್ತೆ ಸಾರಿಗೆ ನಿಗಮ ಅಧಿನಿಯಮ, 1950.**
5) **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಗಳು, 1961.**

ಸಾರಿಗೆ ಸಚಿವಾಲಯದ ಮೂಲಕ ಸರ್ಕಾರವು, ಮೇಲ್ಕಂಡ ಅಧಿನಿಯಮಗಳು ಮತ್ತು ನಿಯಮಗಳಲ್ಲಿರುವ ಚಲಾಯಿಸಬಹುದಾದ ಅಧಿಕಾರಗಳ ಪ್ರಕಾರ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ.

ಸಾರಿಗೆ ಆಯುಕ್ತರ ನಿಯೋಜಿತ ಅಧಿಕಾರಗಳನ್ನು ಚಲಾಯಿಸಲಿಕ್ಕಾಗದಿರುವಂತಹ ಮತ್ತು ಸಾರಿಗೆ ಆಯುಕ್ತರ ನಿಯೋಜಿತ ಅಧಿಕಾರಗಳನ್ನು ಮೀರಿರುವಂತಹ ಸಿಬ್ಬಂದಿಯವರ ಮತ್ತು ಅಧಿಕಾರಿಗಳ ಸೇವಾ ವಿಷಯಗಳಿಗೆ ಸಂಬಂಧಿಸಿದ ಕಾರ್ಯವನ್ನು ಸಾರಿಗೆ ಸಚಿವಾಲಯದಲ್ಲಿ ನಿರ್ವಹಿಸಲಾಗುತ್ತದೆ.

ರಾಜ್ಯ ಸಾರಿಗೆ ಉದ್ದಿಮೆಗಳ ಪ್ರಕಾರ್ಯಗಳನ್ನು ರಸ್ತೆ ಸಾರಿಗೆ ಅಧಿನಿಯಮ, 1950 ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಗಳು, 1961ರ ಅಡಿಯಲ್ಲಿ ನಿರ್ವಹಿಸಲಾಗುತ್ತದೆ. ಹಾಗೂ ಹಣಕಾಸಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಮತ್ತು ಸರ್ಕಾರವು ನಿರ್ವಹಿಸಬೇಕಾದ ಎಲ್ಲಾ ಪ್ರಕಾರ್ಯಗಳನ್ನು ರಸ್ತೆ ಸಾರಿಗೆ ನಿಗಮ ಅಧಿನಿಯಮ 1950 ರ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಗಳು, 1961 ರ ಅನುಸಾರ ಸಾರಿಗೆ ಸಚಿವಾಲಯದಲ್ಲಿ ನಿರ್ವಹಿಸಲಾಗುತ್ತಿದೆ.

ಸಾರಿಗೆ ಸಚಿವಾಲಯದ ಆಡಳಿತ ಮುಖ್ಯಸ್ಥರು ಪ್ರಧಾನ ಕಾರ್ಯದರ್ಶಿಯವರಾಗಿದ್ದು, ಇವರಿಗೆ ಶ್ರೇಣಿ–1 ರ (ಹಿರಿಯ ಶ್ರೇಣಿ) ದರ್ಜೆಯ ಮೂವರು ಅಧಿಕಾರಿಗಳು ಆಡಳಿತದಲ್ಲಿ ನೆರವು ನೀಡುತ್ತಾರೆ. ಆ ಅಧಿಕಾರಿಗಳೆಂದರೆ:

1) **ಸರ್ಕಾರದ ಉಪ ಕಾರ್ಯದರ್ಶಿ:** ಇವರು ಸಾರಿಗೆ ಇಲಾಖೆಯ ಸೇವಾ ವಿಷಯಗಳಿಗೆ ಮತ್ತು ಟೆಂಡರ್ ಬುಲೆಟಿನ್ನುಗಳಿಗೆ ಹಾಗೂ ಇತರ ಎಲ್ಲಾ ತತ್ಸಂಬಂಧಿತ ವಿಷಯಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೆರವು ನೀಡುತ್ತಾರೆ.

2) **ಸರ್ಕಾರದ ಜಂಟಿ ಕಾರ್ಯದರ್ಶಿ ಹಾಗೂ ಆಂತರಿಕ ಹಣಕಾಸು ಸಲಹೆಗಾರರು (ಐಎಫ್ಎ):** ಇವರು ಹಣಕಾಸು ವಿಷಯಗಳಲ್ಲಿ ನೆರವು ನೀಡುತ್ತಾರೆ.


3) **ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು:** ಇವರುಗಳು ಕಾನೂನು ವಿಷಯಗಳಲ್ಲಿ ನೆರವು ನೀಡುತ್ತಾರೆ.

ಸರ್ಕಾರದ ಉಪ ಕಾರ್ಯದರ್ಶಿಯವರು ತಮ್ಮ ಅಧೀನದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವುಗಳ ವಿಷಯಗಳನ್ನು ನಿರ್ವಹಿಸುವ ಒಬ್ಬ ಸರ್ಕಾರದ ಅಧೀನ ಕಾರ್ಯದರ್ಶಿ (ಶ್ರೇಣಿ–1 ಕಿರಿಯ ಶ್ರೇಣಿ) ಹಾಗೂ ಸಾರಿಗೆ ಇಲಾಖೆಯ ವಿಷಯಗಳನ್ನು ನಿರ್ವಹಿಸುವ ಒಬ್ಬ ಪೀಠಾಧಿಕಾರಿ, ಇಬ್ಬರು ಶಾಖಾಧಿಕಾರಿಗಳು (ಶ್ರೇಣಿ–2) ಅವರನ್ನು ಹೊಂದಿದ್ದಾರೆ.

ಸರ್ಕಾರದ ಜಂಟಿ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರಿಗೆ (i) ಹಣಕಾಸು ವಿಷಯವಾಗಿ ಅಭಿಪ್ರಾಯವನ್ನು ನೀಡುವಲ್ಲಿ; ಮತ್ತು (ii) ಆಯವ್ಯಯ ಮತ್ತು ಲೆಕ್ಕ ಪರಿಶೋಧನೆ ವಿಷಯಗಳಲ್ಲಿ ಇಬ್ಬರು ಶಾಖಾಧಿಕಾರಿಗಳು ನೆರವು ನೀಡುವರು.

ಕಾನೂನು ಕೋಶದ ಮುಖ್ಯಸ್ಥರು ಹಾಗೂ ಸರ್ಕಾರದ ಉಪ ಕಾರ್ಯದರ್ಶಿಯವರಿಗೆ ಒಬ್ಬರು ಸರ್ಕಾರದ ಅಧೀನ ಕಾರ್ಯದರ್ಶಿಯವರು ನೆರವು ನೀಡುತ್ತಾರೆ.

(ಚಾರ್ಟ್ ಲಗತ್ತಿಸಿದೆ)



4(ಬಿ)(ii) ಸಾರಿಗೆ ಸಚಿವಾಲಯದ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯ ಮತ್ತು ಜವಾಬ್ದಾರಿಗಳು :

ಎ) **ಸರ್ಕಾರದ ಪ್ರಧಾನ ಕಾರ್ಯದರ್ಶಿ:** ಇವರು ಸಾರಿಗೆ ಸಚಿವಾಲಯ (ಸರ್ಕಾರ)ದ ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಇವರು ಕರ್ನಾಟಕದಲ್ಲಿನ ಸಾರಿಗೆ ವಲಯದ ಎಲ್ಲಾ ವಿಷಯಗಳ ಸಂಬಂಧದಲ್ಲಿ, ವಿಶೇಷವಾಗಿ ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ), ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ವಿಷಯಗಳ ಸಂಬಂಧದಲ್ಲಿ ಪ್ರಭಾರ ಹೊಂದಿರುತ್ತಾರೆ. ಇವರು ಮಾನ್ಯ ಸಾರಿಗೆ ಸಚಿವರು ಅಥವಾ ಸರ್ಕಾರದ ನಿರ್ದೇಶನಗಳಿಗನುಗುಣವಾಗಿ ಮತ್ತು ಆದೇಶಗಳ ಮೇರೆಗೆ ಅಥವಾ ಸಂದರ್ಭಾನುಸಾರ ಸಾಮಾನ್ಯ ಕ್ರಮದಲ್ಲಿ ಕಾರ್ಯನಿರ್ವಹಿಸುತ್ತಾರೆ. ಇವರು ತಮ್ಮ ಅಡಿಯಲ್ಲಿ ಬರುವ ಸಾರಿಗೆ ಇಲಾಖೆ ಮತ್ತು ನಾಲ್ಕು ರಾಜ್ಯ ಸಾರಿಗೆ ಉದ್ಯಮಗಳು ಮತ್ತು ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವುಗಳಲ್ಲಿ ನಿರ್ವಹಿಸಲಾಗುತ್ತಿರುವ ಕೆಲಸದ ಸಮಗ್ರ ಪ್ರಭಾರವನ್ನು ಹೊಂದಿರುತ್ತಾರೆ. ಇವರು ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಮತ್ತು ಪ್ರಕರಣಗಳನ್ನು ವಿಲೇ ಮಾಡುವಲ್ಲಿ ಸಂದರ್ಭಾನುಸಾರ, ಮಾನ್ಯ ಸಾರಿಗೆ ಸಚಿವರು ಅಥವಾ ಸರ್ಕಾರಕ್ಕೆ ನೆರವು ನೀಡುತ್ತಾರೆ ಮತ್ತು ಸಲಹೆ ಕೊಡುತ್ತಾರೆ.

ಬಿ) **ಸರ್ಕಾರದ ಉಪ ಕಾರ್ಯದರ್ಶಿ:** ಇವರು ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ)ಗೆ ಸಂಬಂಧಪಟ್ಟ ವಿಷಯಗಳ ಕುರಿತಾಗಿ ಕಾರ್ಯ ನಿರ್ವಹಿಸುವಲ್ಲಿ ಕಾರ್ಯದರ್ಶಿಗೆ ನೆರವಾಗುತ್ತಾರೆ ಮತ್ತು ಸಾರಿಗೆ ಸಚಿವಾಲಯದ ಸಮಗ್ರ ಉಸ್ತುವಾರಿ ನೋಡಿಕೊಳ್ಳುತ್ತಾರೆ.

ಸಿ) **ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು:** ಇವರು ಹಣಕಾಸು ಸಂಬಂಧಿತ ವಿಷಯಗಳಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಸಲಹೆ ನೀಡುತ್ತಾರೆ. ಇವರು ಸಾರಿಗೆ ಇಲಾಖೆಯ ಬಜೆಟ್ ಸಿದ್ದಪಡಿಸುತ್ತಾರೆ. ಸಾರಿಗೆ ಇಲಾಖೆ ಮತ್ತು ಸಾರಿಗೆ ಇಲಾಖೆಯ ಅಧೀನದಲ್ಲಿ ಬರುವ 5 ಸಂಸ್ಥೆಗಳ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳ ವಿಷಯಗಳಲ್ಲಿ ಇವರು ಹೊಣೆಗಾರರಾಗಿರುತ್ತಾರೆ.

ಡಿ) **ಸರ್ಕಾರದ ಉಪಕಾರ್ಯದರ್ಶಿ ಮತ್ತು ಕಾನೂನು ಕೋಶದ ಮುಖ್ಯಸ್ಥರು:** ಇವರು ಕಾನೂನು ಸಂಬಂಧಿತ ವಿಷಯಗಳಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಸಲಹೆ ನೀಡುತ್ತಾರೆ.

ಇ) **ಸರ್ಕಾರದ ಅಧೀನ ಕಾರ್ಯದರ್ಶಿ:** ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ), ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಉಪ ಕಾರ್ಯದರ್ಶಿಗೆ ನೆರವಾಗುತ್ತಾರೆ ಮತ್ತು ಕಡತಗಳನ್ನು ಸಲ್ಲಿಸುತ್ತಾರೆ. ಇವರು ಸಾಮಾನ್ಯವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಮತ್ತು ಸರ್ಕಾರದ ಉಪ ಕಾರ್ಯದರ್ಶಿಯವರ ಆದೇಶಗಳನ್ವಯ ಕಾರ್ಯನಿರ್ವಹಿಸುತ್ತಾರೆ. ಇವರು ಕಡತಗಳಲ್ಲಿರುವ ಆದೇಶಗಳ ಪ್ರಕಾರ ಪತ್ರಗಳು, ಸುತ್ತೋಲೆಗಳು, ಸರ್ಕಾರಿ ಆದೇಶಗಳು ಮುಂತಾದವುಗಳನ್ನು ಹೊರಡಿಸುತ್ತಾರೆ. ಇವರು ತಮಗೆ ವಹಿಸಿದ ಕಾರ್ಯವನ್ನು ಕಾನೂನಿನ ಅನುಸಾರ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಇವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರಲ್ಲಿ ನಮೂದಿಸಲಾದಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಇವರು, ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ರಾಜ್ಯ ಸಾರ್ವಜನಿಕ ಮಾಹಿತಿಯ ಮೊದಲ ಮೇಲ್ಮನವಿ ಪ್ರಾಧಿಕಾರವೂ ಸಹ ಆಗಿರುತ್ತಾರೆ.

ಎಫ್) ಸರ್ಕಾರದ ಅಧೀನ ಕಾರ್ಯದರ್ಶಿ(ಕಾನೂನು ಕೋಶ): ಇವರು ಕಾನೂನು ವಿಷಯಗಳಿಗೆ, ನ್ಯಾಯಾಲಯದ ವಿಷಯಗಳಿಗೆ ಸಂಬಂಧಪಟ್ಟಂತೆ ಸಾರಿಗೆ ಇಲಾಖೆಯ ಕಡತಗಳನ್ನು ಸಿದ್ದಪಡಿಸಿ ಮಂಡಿಸುವಲ್ಲಿ ಕಾನೂನು ಕೋಶದ ಮುಖ್ಯಸ್ಥರಿಗೆ ನೆರವಾಗುತ್ತಾರೆ. ಇವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರಲ್ಲಿ ನಮೂದಿಸಲಾದಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಜಿ) **ಶಾಖಾಧಿಕಾರಿಗಳು:**

(i) ಪೀಠಾಧಿಕಾರಿ (ಮೋಟಾರು ವಾಹನಗಳ ಶಾಖೆ): ಇವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರಲ್ಲಿ ಗೊತ್ತುಪಡಿಸಿದ ಕಾರ್ಯವಿಧಾನದ ಪ್ರಕಾರ ವಿಷಯ ನಿರ್ವಾಹಕರು ಸಲ್ಲಿಸಿದ ಕಡತಗಳು/ಪತ್ರಗಳನ್ನು ಪರಿಶೀಲಿಸುತ್ತಾರೆ. ಇವರು ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ)ಗೆ ಸಂಬಂಧಪಟ್ಟ ವಿಷಯಗಳಲ್ಲಿ ಮತ್ತು ಇತರ ಸಾರಿಗೆ ವಿಷಯಗಳಲ್ಲಿ ಅಧೀನ ಕಾರ್ಯದರ್ಶಿಗೆ ನೆರವಾಗುತ್ತಾರೆ ಮತ್ತು ಕಡತಗಳನ್ನು ಸಲ್ಲಿಸುತ್ತಾರೆ. ಇವರು ಸಿ ಮತ್ತು ಡಿ ವರ್ಗಗಳಿಗೆ ಸಂಬಂಧಿಸಿದಂತೆ ಕಡತಗಳಲ್ಲಿರುವ ಆದೇಶಗಳ ಪ್ರಕಾರ ಪತ್ರಗಳು, ಸುತ್ತೋಲೆಗಳು, ಸರ್ಕಾರಿ ಆದೇಶಗಳು ಮುಂತಾದವುಗಳನ್ನು ಹೊರಡಿಸುತ್ತಾರೆ. ಇವರು ತಮಗೆ ವಹಿಸಿದ ಕಾರ್ಯವನ್ನು ಕಾನೂನಿನ ಅನುಸಾರ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಇವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರಲ್ಲಿ ನಮೂದಿಸಲಾದಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಇವರು ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಸಹ ಆಗಿರುತ್ತಾರೆ.

(ii) ಶಾಖಾಧಿಕಾರಿ (ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಶಾಖೆ): ಇವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವುಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿರ್ವಹಿಸುತ್ತಾರೆ. ಇವರು ವಿಷಯ ನಿರ್ವಾಹಕರು ಸಲ್ಲಿಸುವ ಕಡತಗಳನ್ನು ಪರಿಶೀಲಿಸಿ ಅಧೀನ ಕಾರ್ಯದರ್ಶಿಗಳಿಗೆ ಸಲ್ಲಿಸುತ್ತಾರೆ. ಇವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರಲ್ಲಿ ನಮೂದಿಸಿರುವಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ಇವರು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸಹ ಆಗಿರುತ್ತಾರೆ.

(iii) ಶಾಖಾಧಿಕಾರಿ, ಸ್ವೀಕೃತಿಗಳು, ರವಾನೆ ಮತ್ತು ಸಮನ್ವಯ: ಇವರು ಸ್ವೀಕೃತಿಗಳು, ಪ್ರಕಟಣೆಗಳು ಮತ್ತು ಸಮನ್ವಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ನಿರ್ವಹಿಸುತ್ತಾರೆ. ಸಾರಿಗೆ ಸಚಿವಾಲಯಕ್ಕೆ ಸಂಬಂಧಪಟ್ಟ ವಿವಿಧ ಸಭೆಗಳನ್ನು ನಡೆಸುವಲ್ಲಿ ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿಗೆ ಇವರು ನೆರವು ನೀಡುತ್ತಾರೆ. ಇವರು ಒಂದಕ್ಕಿಂತ ಹೆಚ್ಚಿನ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸಹ ನಿರ್ವಹಿಸುತ್ತಾರೆ. ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ಇವರು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸಹ ಆಗಿರುತ್ತಾರೆ.

(iv) ಶಾಖಾಧಿಕಾರಿ (ಆಂತರಿಕ ಆರ್ಥಿಕ ಸಲಹೆ, ಅಭಿಪ್ರಾಯ): ಇವರು ಸರ್ಕಾರದ ಅಧೀನ ಕಾರ್ಯದರ್ಶಿ ಅಥವಾ ಸರ್ಕಾರದ ಉಪಕಾರ್ಯದರ್ಶಿ ಅಥವಾ ಸರ್ಕಾರದ ಜಂಟಿ ಕಾರ್ಯದರ್ಶಿಗಳು ಆಂತರಿಕ ಆರ್ಥಿಕ ಸಲಹೆಗಾರರಿಗೆ ಕಳುಹಿಸಿದ ಹಣಕಾಸಿನ ವಿಷಯಗಳಿಗೆ ಸಂಬಂಧಪಟ್ಟಂತೆ ಸಾರಿಗೆ ವಿಭಾಗದ ಪ್ರಕರಣಗಳನ್ನು ಪರಿಶೀಲಿಸುವಲ್ಲಿ ಮತ್ತು ಸಿದ್ದಪಡಿಸಿ ಒಪ್ಪಿಸುವಲ್ಲಿ ಆಂತರಿಕ ಆರ್ಥಿಕ ಸಲಹೆಗಾರರಿಗೆ ನೆರವು ನೀಡುತ್ತಾರೆ. ಇವರು

ಅಸ್ತಿತ್ವದಲ್ಲಿರುವ ನಿಯಮಗಳು/ಕಾನೂನುಗಳಿಗೆ ಮತ್ತು ಹಣಕಾಸು ವಿಷಯಗಳಿಗೆ ಸಂಬಂಧಪಟ್ಟಂತೆ ಪ್ರಕರಣಗಳನ್ನು ಪರಿಶೀಲಿಸಿ ಕಡತಗಳನ್ನು ಆಂತರಿಕ ಆರ್ಥಿಕ ಸಲಹೆಗಾರರಿಗೆ ಸಲ್ಲಿಸುತ್ತಾರೆ. ಇವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರಲ್ಲಿ ನಮೂದಿಸಿರುವಂತೆ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

(v) ಶಾಖಾಧಿಕಾರಿ (ಆಂತರಿಕ ಆರ್ಥಿಕ ಸಲಹೆ, ಬಜೆಟ್): ಇವರು ಸಾರಿಗೆ ಇಲಾಖೆಯ ಬಜೆಟ್ ಅನ್ನು ಸಿದ್ದಪಡಿಸುವಲ್ಲಿ ಆಂತರಿಕ ಆರ್ಥಿಕ ಸಲಹೆಗಾರರಿಗೆ ನೆರವು ನೀಡುತ್ತಾರೆ. ಇವರು ಸಾರಿಗೆ ಸಚಿವಾಲಯದ ಅಡಿಯಲ್ಲಿ ಬರುವ ಎಲ್ಲಾ ಘಟಕಗಳ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ ವಿಷಯಗಳಿಗೆ ಸಂಬಂಧಪಟ್ಟಂತೆಯೂ ಸಹ ಆಂತರಿಕ ಆರ್ಥಿಕ ಸಲಹೆಗಾರರಿಗೆ ನೆರವು ನೀಡುತ್ತಾರೆ. ಇವರು ಕರ್ನಾಟಕ ಸರ್ಕಾರದ ಸಚಿವಾಲಯ (ಪರಿಷ್ಕೃತ) 2005 ರಲ್ಲಿ ನಮೂದಿಸಿರುವಂತೆ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಹೆಚ್) ವಿಷಯ ನಿರ್ವಾಹಕರು: ಮೋಟಾರು ವಾಹನಗಳ ಶಾಖೆಯಲ್ಲಿ ಒಬ್ಬ ಹಿರಿಯ ಸಹಾಯಕ ಹಾಗೂ ಒಬ್ಬ ಸಹಾಯಕ ಇರುತ್ತಾರೆ. ರಾಜ್ಯ ಸಾರಿಗೆ ನಿಗಮದ ಶಾಖೆಯಲ್ಲಿ ಒಬ್ಬ ಹಿರಿಯ ಸಹಾಯಕ ಹಾಗೂ ಇಬ್ಬರು ಸಹಾಯಕರು ಇರುತ್ತಾರೆ. ಶಾಖಾಧಿಕಾರಿ, ಸ್ವೀಕೃತಿ ರವಾನೆ ಮತ್ತು ಸಮನ್ವಯ ಶಾಖೆಗೆ ಒಬ್ಬ ಸಹಾಯಕ, ಇಬ್ಬರು ಕಿರಿಯ ಸಹಾಯಕರು ಇರುತ್ತಾರೆ. ಇಬ್ಬರು ಕಿರಿಯ ಸಹಾಯಕ ಹುದ್ದೆಯು ಖಾಲಿ ಇರುತ್ತದೆ. ಆಂತರಿಕ ಆರ್ಥಿಕ ಸಲಹೆಗಾರರು, ಅಭಿಪ್ರಾಯ ಇವರಿಗೆ ಇಬ್ಬರು ಹಿರಿಯ ಸಹಾಯಕರು ಹಾಗೂ ಒಬ್ಬ ಸಹಾಯಕರು ಇರುತ್ತಾರೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಬಜೆಟ್ ಇವರಿಗೆ ಒಬ್ಬ ಹಿರಿಯ ಸಹಾಯಕ ಮತ್ತು ಇಬ್ಬರು ಸಹಾಯಕರು ಇರುತ್ತಾರೆ. ಅವರು ತಮಗೆ ವಹಿಸಿದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಅವರು ಜಾರಿಯಲ್ಲಿರುವ ನಿಯಮಗಳು/ಅಧಿನಿಯಮಗಳು ಮತ್ತು ಕಾನೂನು ಇತ್ಯಾದಿಗಳ ಪ್ರಕಾರ ಪ್ರಸ್ತಾವನೆಗಳನ್ನು/ಸ್ವೀಕೃತಿಗಳನ್ನು ಪರಿಶೀಲಿಸಿ, ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರ ಪ್ರಕಾರ ಕಡತಗಳಲ್ಲಿ ಟಿಪ್ಪಣಿಗಳನ್ನು ಬರೆದು, ಅವುಗಳನ್ನು ಶಾಖಾಧಿಕಾರಿಗೆ ಸಲ್ಲಿಸುತ್ತಾರೆ. ಅವರು ಆದೇಶಗಳ ಪ್ರಕಾರ ಕಡತದಲ್ಲಿ ಕರಡುಗಳನ್ನು ಸಹ ಸಿದ್ದಪಡಿಸಿ ಒಪ್ಪಿಸುತ್ತಾರೆ. ಹಿರಿಯ ಸಹಾಯಕ ಮೋಟಾರು ವಾಹನ ಶಾಖೆ ಮತ್ತು ಹಿರಿಯ ಸಹಾಯಕ ರಾಜ್ಯ ಸಾರಿಗೆ ನಿಗಮದ ಶಾಖೆ ಇವರುಗಳು ಮಾಹಿತಿ ಹಕ್ಕು ಅಧಿನಿಯಮ 2005ರ ಅನ್ವಯ ರಾಜ್ಯ ಸಹಾಯಕ ಮಾಹಿತಿ ಅಧಿಕಾರಿಯಾಗಿಯೂ ಕರ್ತವ್ಯ ನಿರ್ವಹಿಸುತ್ತಾರೆ.

ಐ) ಕಿರಿಯ ಸಹಾಯಕರು : ಪ್ರತಿಯೊಂದು ಶಾಖೆಗೂ ಅಂದರೆ ಮೋಟಾರು ವಾಹನ ಶಾಖೆಗೆ ಮತ್ತು ಕರ್ನಾಟಕ ರಸ್ತೆ ಸಾರಿಗೆ ನಿಗಮ/ಸಂಸ್ಥೆಗಳ ಶಾಖೆಗೆ ಒಬ್ಬ ಕಿರಿಯ ಸಹಾಯಕರಿರುತ್ತಾರೆ. ಸರ್ಕಾರದ ಉಪ ಕಾರ್ಯದರ್ಶಿ, ಕಾರ್ಯದರ್ಶಿ, ಇವರಿಗೂ ಸಹ ಒಬ್ಬ ಕಿರಿಯ ಸಹಾಯಕರು ಇರುತ್ತಾರೆ. ಅವರು ಪ್ರತಿ ದಿನವು ಶಾಖೆಗೆ ಬರುವ ಟಪಾಲುಗಳನ್ನು ಮತ್ತು ಕಡತಗಳನ್ನು ಸ್ವೀಕರಿಸಿ ಅವುಗಳನ್ನು ವಿಷಯ ನಿರ್ವಾಹಕರಿಗೆ ವಿತರಣೆ ಮಾಡುತ್ತಾರೆ, ಕಡತಗಳ ಚಲನವಲನವನ್ನು ನಿರ್ವಹಿಸುತ್ತಾರೆ. ಪತ್ರ ಮೊದಲಾದವುಗಳನ್ನು ಹೊರಡಿಸುವುದಕ್ಕಾಗಿ ಜವಾಬ್ದಾರರಾಗಿರುತ್ತಾರೆ. ಅವರು ಕರ್ನಾಟಕ ಸರ್ಕಾರದ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರ ಪ್ರಕಾರ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಜೆ) ಶೀಘ್ರಲಿಪಿಗಾರರು : ಸರ್ಕಾರದ ಅಧೀನ ಕಾರ್ಯದರ್ಶಿ, ಸಕಾರದ ಉಪ ಕಾರ್ಯದರ್ಶಿ, ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಶೀಘ್ರಲಿಪಿಗಾರರು ಇರುತ್ತಾರೆ. ಅವರು ಅಧಿಕಾರಿಗಳು ನೀಡಿರುವ ಉಕ್ತಲೇಖನವನ್ನು ಬೆರಳಚ್ಚು ಮಾಡುತ್ತಾರೆ ಮತ್ತು ಅಧಿಕಾರಿಗಳ ನಿರ್ದೇಶನಗಳ ಪ್ರಕಾರ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಸಂಬಂಧಪಟ್ಟ ಶೀಘ್ರಲಿಪಿಗಾರರು/ಆಪ್ತ ಸಿಬ್ಬಂದಿ ವರ್ಗದವರು ಸಾರಿಗೆ ಇಲಾಖೆಯ ಪ್ರಥಮ ಶ್ರೇಣಿಯ ಅಧಿಕಾರಿಗಳ ಎಪಿಆರ್‌ಗಳಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಸಹ ನಿರ್ವಹಿಸುತ್ತಾರೆ. ಅವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ)2005 ರ ಪ್ರಕಾರ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಕೆ) ಬೆರಳಚ್ಚುಗಾರರು: ಶಾಖೆಗಳಿಗೆ ಸಂಬಂಧಪಟ್ಟಂತೆ ಬೆರಳಚ್ಚುಗಾರರು ಇರುತ್ತಾರೆ. ಅವರು ಶಾಖೆಯಲ್ಲಿನ ಬೆರಳಚ್ಚು ಕಾರ್ಯವನ್ನು ನಿರ್ವಹಿಸುತ್ತಾರೆ.

ಎಲ್) ದಲಾಯಿತರು (ಶ್ರೇಣಿ–4): ದಲಾಯಿತರು ಕಛೇರಿಯನ್ನು ಅಚ್ಚುಕಟ್ಟಾಗಿ ಮತ್ತು ಚೊಕ್ಕಟವಾಗಿಡುತ್ತಾರೆ. ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರಲ್ಲಿನ ಸೂಚನೆಗಳ ಪ್ರಕಾರ ಅವರು ಇತರ ಶಾಖೆಗಳಿಗೆ / ಇಲಾಖೆಗಳಿಗೆ ಕಡತಗಳನ್ನು / ಟಪಾಲುಗಳನ್ನು ತಲುಪಿಸುತ್ತಾರೆ. ಮುಕ್ತಾಯ ಮಾಡಲಾದ ಕಡತಗಳನ್ನು ಒಟ್ಟಿಗೆ ಸೇರಿಸಿ ಹೊಲಿದು, ಅವುಗಳನ್ನು ಸಾಮಾನ್ಯ ದಾಖಲೆ ಶಾಖೆಗೆ ತಲುಪಿಸುತ್ತಾರೆ.

4(ಬಿ)(iii) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಹಂತಗಳೂ ಸೇರಿದಂತೆ ತೀರ್ಮಾನವನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು:

ಎ) ತೀರ್ಮಾನವನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಲಾಗುವಂತಹ ಕಾರ್ಯವಿಧಾನವು ಹೀಗಿದೆ.

ವಿಷಯ ನಿರ್ವಾಹಕರು: ಇವರು ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ ಹೊಸ ಕಡತವನ್ನು ತೆರೆಯುತ್ತಾರೆ ಅಥವಾ ಈಗಾಗಲೇ ಇರುವ ಕಡತದಲ್ಲಿನ ಪತ್ರಗಳ ಮಾಹಿತಿಯನ್ನು ಪರಿಶೀಲಿಸುತ್ತಾರೆ.

ಶಾಖಾಧಿಕಾರಿ: ಇವರು ಪ್ರಸ್ತಾವನೆಗೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ಪರಿಶೀಲಿಸುತ್ತಾರೆ ಮತ್ತು ಕೈಗೊಳ್ಳಬೇಕಾದ ಮುಂದಿನ ಕ್ರಮಕ್ಕಾಗಿ ಕಡತವನ್ನು ಸರ್ಕಾರದ ಅಧೀನ ಕಾರ್ಯದರ್ಶಿಗಳಿಗೆ ಗುರುತು ಮಾಡಿ ಕಳುಹಿಸುತ್ತಾರೆ.

ಸರ್ಕಾರದ ಅಧೀನ ಕಾರ್ಯದರ್ಶಿ: ಇವರು ಪ್ರಸ್ತಾವನೆ ಕುರಿತು ಕೈಗೊಳ್ಳಬೇಕಾದ ಕ್ರಮವನ್ನು ಸೂಚಿಸುತ್ತಾರೆ ಮತ್ತು ಇರುವಂತಹ ನಿಯಮಗಳು ಅಥವಾ ಅಧಿನಿಯಮಗಳ ಉಪಬಂಧಗಳು, ಪೂರ್ವ ನಿದರ್ಶನ ಪ್ರಕರಣಗಳ ಹಿನ್ನಲೆಯಲ್ಲಿ ಅದರ ಅರ್ಥವನ್ನು ವಿವರಿಸುತ್ತಾರೆ ಅಥವಾ ನಿಯೋಜಿತವಾದ ಅಧಿಕಾರಗಳ ಮೇರೆಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

ಸರ್ಕಾರದ ಉಪ ಕಾರ್ಯದರ್ಶಿ: ಇವರು ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿ, ಈ ಸಂಬಂಧ ಕೈಗೊಳ್ಳಬೇಕಾದ ಅಂತಿಮ ಕ್ರಮದ ಅನುಮೋದನೆಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಕಡತವನ್ನು ಸಲ್ಲಿಸುತ್ತಾರೆ ಅಥವಾ ನಿಯೋಜಿತವಾದ ಅಧಿಕಾರಗಳ ಮೇರೆಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ: ಇವರು ನಿಯೋಜಿತ ಅಧಿಕಾರಿಗಳ ಮೇರೆಗೆ ಪ್ರಸ್ತಾವನೆ ಕುರಿತಂತೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ ಮತ್ತು ಅಗತ್ಯವಾದರೆ, ಸಂದರ್ಭಾನುಸಾರ, ಸಾರಿಗೆ ಇಲಾಖೆಯ ಮಾನ್ಯ ಸಚಿವರಿಗೆ ಅಥವಾ ಸರ್ಕಾರಕ್ಕೆ ಅಂತಿಮ ಆದೇಶಗಳಿಗಾಗಿ ಕಡತವನ್ನು ಸಲ್ಲಿಸಿರುತ್ತಾರೆ.

(ಬಿ) ಮೇಲ್ವಿಚಾರಣೆಯ ಹಂತಗಳು:–

ಮೋಟಾರು ವಾಹನಗಳ ಶಾಖೆ: ವಿಷಯ ನಿರ್ವಾಹಕ → ಪೀಠಾಧಿಕಾರಿ → ಸರ್ಕಾರದ ಅಧೀನ ಕಾರ್ಯದರ್ಶಿ → ಸರ್ಕಾರದ ಉಪಕಾರ್ಯದರ್ಶಿ → ಸರ್ಕಾರದ ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಶಾಖೆ: ವಿಷಯ ನಿರ್ವಾಹಕ→ಶಾಖಾಧಿಕಾರಿ→ ಸರ್ಕಾರದ ಅಧೀನ ಕಾರ್ಯದರ್ಶಿ →ಸರ್ಕಾರದ ಉಪ ಕಾರ್ಯದರ್ಶಿ→ ಸರ್ಕಾರದ ಪ್ರಧಾನ ಕಾರ್ಯದರ್ಶಿ

ಸ್ವೀಕೃತಿ ರವಾನೆ ಮತ್ತು ಸಮನ್ವಯ ಶಾಖೆ : ವಿಷಯ ನಿರ್ವಾಹಕ→ಶಾಖಾಧಿಕಾರಿ→ಸರ್ಕಾರದ ಅಧೀನ ಕಾರ್ಯದರ್ಶಿ→ ಸರ್ಕಾರದ ಉಪ ಕಾರ್ಯದರ್ಶಿ→ ಸರ್ಕಾರದ ಪ್ರಧಾನ ಕಾರ್ಯದರ್ಶಿ

ಆಂತರಿಕ ಆರ್ಥಿಕ ಸಲಹೆಗಾರರು (ಅಭಿಪ್ರಾಯ) : ವಿಷಯ ನಿರ್ವಾಹಕ → ಶಾಖಾಧಿಕಾರಿ → ಆಂತರಿಕ ಆರ್ಥಿಕ ಸಲಹೆಗಾರರು → ಸರ್ಕಾರದ ಪ್ರಧಾನ ಕಾರ್ಯದರ್ಶಿ

ಆಂತರಿಕ ಆರ್ಥಿಕ ಸಲಹೆಗಾರರು (ಬಜೆಟ್) : ವಿಷಯ ನಿರ್ವಾಹಕ → ಶಾಖಾಧಿಕಾರಿ → ಆಂತರಿಕ ಹಣಕಾಸು ಸಲಹೆಗಾರರು → ಸರ್ಕಾರದ ಪ್ರಧಾನ ಕಾರ್ಯದರ್ಶಿ

ಕಾನೂನು ಕೋಶ: ವಿಷಯ ನಿರ್ವಾಹಕ →ಸರ್ಕಾರದ ಅಧೀನ ಕಾರ್ಯದರ್ಶಿ →ಕಾನೂನು ಕೋಶದ ಮುಖ್ಯಸ್ಥರು → ಸರ್ಕಾರದ ಪ್ರಧಾನ ಕಾರ್ಯದರ್ಶಿ

4(ಬಿ)(iv) ಪ್ರಕಾರ್ಯಗಳ ನಿರ್ವಹಣೆಗಾಗಿ ರೂಪಿಸಲಾದ ಸೂತ್ರಗಳು:

ದಲಾಯಿತ: ಆತನು ತನಗೆ ವಹಿಸಿಕೊಡಲಾದ ಕೆಲಸಗಳನ್ನು ಆ ದಿನದಂದೇ ನಿರ್ವಹಿಸಬೇಕು.

ಕಿರಿಯ ಸಹಾಯಕ: ಆತನು ತನಗೆ ವಹಿಸಿಕೊಡಲಾದ ಕೆಲಸಗಳನ್ನು ಆ ದಿನದಂದೇ ನಿರ್ವಹಿಸಬೇಕು.

ವಿಷಯ ನಿರ್ವಾಹಕರು: ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರ ಪ್ರಕಾರ ಕಡತಗಳನ್ನು/ಟಪಾಲುಗಳನ್ನು 5 ದಿನಗಳವರೆಗೂ ಸಲ್ಲಿಸಬೇಕು.

ಶಾಖಾಧಿಕಾರಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸರ್ಕಾರದ ಉಪಕಾರ್ಯದರ್ಶಿ
ಸರ್ಕಾರದ ಜಂಟಿ ಕಾರ್ಯದರ್ಶಿ
ಸರ್ಕಾರದ ಪ್ರಧಾನ ಕಾರ್ಯದರ್ಶಿ
} **ಆದ್ಯತೆಯ ಮೇಲೆ ಕೆಲಸವನ್ನು ನಿರ್ವಹಿಸಬೇಕು**

4(ಬಿ)(v) ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ, ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ನೌಕರರು ಬಳಸುವ ನಿಯಮಗಳು, ವಿನಿಮಯಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು:

1. ಕೇಂದ್ರ ಮೋಟಾರು ವಾಹನಗಳ ಅಧಿನಿಯಮ, 1988.
2. ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989.
3. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957.
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ನಿಯಮಗಳು, 1957.
5. ರಸ್ತೆ ಸಾರಿಗೆ ನಿಗಮ ಅಧಿನಿಯಮ, 1950.
6. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಗಳು, 1961.
7. ಕರ್ನಾಟಕ ಸಿವಿಲ್ ಸೇವಾ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1974.
8. ಇಲಾಖಾ ಬಡ್ತಿ ಸಮಿತಿಗಳು.
9. ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977.
10. ಕರ್ನಾಟಕ ಸಿವಿಲ್ ಸೇವಾ (ಪ್ರೊಬೆಷನ್) ನಿಯಮಗಳು, 1977.
11. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ ಮೀಸಲಾತಿ ರೋಸ್ಟರ್.
12. ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು, 1994.
13. ಕರ್ನಾಟಕ ಲೋಕಸೇವಾ ಆಯೋಗ (ಸಮಾಲೋಚನೆ) ವಿನಿಯಮ, 2000.
14. ಸೇವೆಯಲ್ಲಿರುವಾಗ ಮೃತರಾದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪ ಆಧಾರದಲ್ಲಿ ನೇಮಕಾತಿ.
15. ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957.
16. ಕರ್ನಾಟಕ ಸಿವಿಲ್ ಸೇವಾ (ನಡವಳಿಕೆ) ನಿಯಮಗಳು, 1966.
17. ಕರ್ನಾಟಕ ಸರ್ಕಾರಿ (ವ್ಯವಹಾರ ಹಂಚಿಕೆ) ನಿಯಮಗಳು, 1977.

18. ಕರ್ನಾಟಕ ಕಾರ್ಯನಿರ್ವಹಣಾ ನಿಯಮಗಳು, 1977.

19. ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1963.

20. ಕರ್ನಾಟಕ ಸಿವಿಲ್ ಸೇವಾ ನಿಯಮಗಳು.

4(ಬಿ)(vi) ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಾಸ್ತಾವೇಜುಗಳ ಪ್ರವರ್ಗಗಳ ವಿವರಣೆ:

ಸಾರಿಗೆ ಇಲಾಖೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ದೇವರಾಜ ಅರಸ್ ಟ್ರಕ್ ಟರ್ಮಿನಲ್ ಲಿ., – ಇವುಗಳಿಗೆ ಸಂಬಂಧಪಡುವ ಎಲ್ಲಾ ಕಡತಗಳನ್ನು ಸಾರಿಗೆ ಸಚಿವಾಲಯವು ನಿರ್ವಹಿಸುತ್ತದೆ ಮತ್ತು ಪರಿಷ್ಕರಿಸುತ್ತದೆ.

4(ಬಿ)(vii) ಕಾರ್ಯನೀತಿಯ ರಚನಾ ನೀತಿ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚನೆ ನಡೆಸುವುದಕ್ಕಾಗಿ ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತೆ ಯಾವುದೇ ವ್ಯವಸ್ಥೆಯ ವಿವರಗಳು:

ತೆಗೆದುಕೊಂಡ ಕಾರ್ಯನೀತಿ ನಿರ್ಧಾರಗಳು ಹಾಗೂ ಮಾಡಿರುವ ಅನುಷ್ಠಾನವು ಮೋಟಾರು ವಾಹನಗಳ ಅಧಿನಿಯಮ ಮತ್ತು ನಿಯಮಗಳಲ್ಲಿ ಒಳಗೊಂಡಿರುತ್ತದೆ. ಅಂಥ ಸಮಾಲೋಚನೆಗಾಗಿ ಅಧಿನಿಯಮ ಮತ್ತು ನಿಯಮಗಳಲ್ಲಿ ಉಪಬಂಧವನ್ನು ಕಲ್ಪಿಸಿದರೆ, ತದನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.

4(ಬಿ)(viii) ಸಲಹೆಯ ಉದ್ದೇಶಕ್ಕಾಗಿ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರಣೆ:

ಸಾರಿಗೆ ಸಚಿವಾಲಯದಲ್ಲಿ ಅಂಥ ಯಾವುದೇ ಮಂಡಳಿಗಳು ಪರಿಷತ್ತುಗಳು ಅಥವಾ ಸಮಿತಿಗಳು ಇಲ್ಲ.

4(ಬಿ)(ix) ಅಧಿಕಾರಿಗಳು ಮತ್ತು ನೌಕರರ ನಿರ್ದೇಶಿಕೆ:–

ಸಾರಿಗೆ ಇಲಾಖೆ

ಕ್ರ ಸಂ.	ಪದನಾಮ	ಅಧಿಕಾರಿ/ನೌಕರರ ಹೆಸರು (ಶ್ರೀಯುತರು)	ದೂರವಾಣಿ ಸಂಖ್ಯೆ ಕಛೇರಿ/ಮನೆ	ಇ–ಮೇಲ್ ವಿಳಾಸ
1	ಸರ್ಕಾರದ ಪ್ರಧಾನ ಕಾರ್ಯದರ್ಶಿ	ಡಾ: ಬಿ. ಬಸವರಾಜು, ಭಾ.ಆ.ಸೇ.,	080–22353912 080–22032548	secretarytransport@gmail.com
2	ಶಾಖಾಧಿಕಾರಿ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ	––	---
3	ಹಿರಿಯ ಸಹಾಯಕರು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ	ಮಹಾಜಬೀನ್‌ಸೈ.ಮುಲ್ಲಾ	080–22353912	meharkgs@gmail.com
4	ಶೀಘ್ರಲಿಪಿಗಾರ್ತಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ	––	––
5	ದಲಾಯಿತ್ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ	––	––
6	ಜಮೇದಾರ್ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ	––	––
7	ಸರ್ಕಾರದ ಉಪಕಾರ್ಯದರ್ಶಿ	ಬಿ.ಎನ್. ಶ್ರೀನಿವಾಸ	080–22353962 080–22032213	dstransport2016@gmail.com
8	ಶೀಘ್ರಲಿಪಿಗಾರರು ಉಪ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ	––	––
9	ಕಿರಿಯ ಸಹಾಯಕರು	ಖಾಲಿ	––	––
10	ಜಮೇದಾರ್ / ದಲಾಯತ್ (ಖಾಲಿ)	ಖಾಲಿ	––	––

ಕ್ರ ಸಂ.	ಪದನಾಮ	ಅಧಿಕಾರಿ/ನೌಕರರ ಹೆಸರು (ಶ್ರೀಯುತರು)	ದೂರವಾಣಿ ಸಂಖ್ಯೆ ಕಛೇರಿ/ಮನೆ	ಇ–ಮೇಲ್ ವಿಳಾಸ
11	ಸರ್ಕಾರದ ಅಧೀನ ಕಾರ್ಯದರ್ಶಿ	ಕೆ.ಬೀರೇಶ್	080–22032292 (R) 7760992043	undersecretarytransport@ gmail.com
12	ಶೀಘ್ರಲಿಪಿಗಾರರು ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ	––	––
13	ಜಮೇದಾರ್ ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ	ಶೋಭಾ ಎಸ್.ವಿ	080–22032292	––
14	ಶಾಖಾಧಿಕಾರಿ ಸಾರಿಗೆ–1 ಶಾಖೆ	ಎಸ್.ಎಂ. ಕುಂಬಾರ್	080–22032914	––
15	ಹಿರಿಯ ಸಹಾಯಕರು ಸಾರಿಗೆ–1 ಶಾಖೆ	ನಾರಾಯಣ ಸ್ವಾಮಿ ಎಸ್.	080–22032014	––
16	ಸಹಾಯಕರು ಸಾರಿಗೆ–1 ಶಾಖೆ	ಶಿವಕೇಶವ . ಪಿ	080–22032914	––
17	ಸಹಾಯಕರು ಸಾರಿಗೆ–1 ಶಾಖೆ	ಖಾಲಿ	––	––
18	ಕಿರಿಯ ಸಹಾಯಕರು ಸಾರಿಗೆ–1 ಶಾಖೆ	ಮೇರಿ ಸುಪ್ರಿಯ	080–22032914	––
19	ಬೆರಳಚ್ಚುಗಾರರು ಸಾರಿಗೆ–1 ಶಾಖೆ	ಆರ್.ದೀಪಾ	080–22032914	––
20	ದಲಾಯತ್ ಸಾರಿಗೆ–1 ಶಾಖೆ	ಖಾಲಿ	––	––
21	ಪೀಠಾಧಿಕಾರಿ ಸಾರಿಗೆ–2 ಶಾಖೆ	ಎಸ್. ನಾಗರಾಜು	080–22032014	Kgsnagaraj@gmail.com
22	ಹಿರಿಯ ಸಹಾಯಕರು ಸಾರಿಗೆ–2 ಶಾಖೆ	ಪ್ರಭಾವತಿ ಟಿ.ಆರ್.	080–22032014	--
23	ಸಹಾಯಕರು ಸಾರಿಗೆ–2 ಶಾಖೆ	ಖಾಲಿ	––	––
24	ಸಹಾಯಕರು ಸಾರಿಗೆ–2 ಶಾಖೆ	ಗಂಗಾಧರ ಹೆಚ್.ಎಂ.	080–22032014	gangadhargs@gmail.com
24	ಬೆರಳಚ್ಚುಗಾರರು ಸಾರಿಗೆ–2 ಶಾಖೆ	ಶ್ವೇತಾ	080–22032014	Shwethanagu88@gmail.com
25	ದಲಾಯತ್/ ಗ್ರೂಪ್ – ಡಿ ಸಾರಿಗೆ–2 ಶಾಖೆ	ಖಾಲಿ	––	––
26	ಶಾಖಾಧಿಕಾರಿ ಸಮನ್ವಯ ಶಾಖೆ	ಆರ್. ಮಂಜುಳ	080–22032336	transportsarige@gmail.com
27	ಸಹಾಯಕರು ಸಮನ್ವಯ ಶಾಖೆ	ಆರ್. ಸರಸ್ವತಮ್ಮ	080–22032336	
28	ಕಿರಿಯ ಸಹಾಯಕರು ಸಮನ್ವಯ ಶಾಖೆ	ಖಾಲಿ	––	––
29	ಕಿರಿಯ ಸಹಾಯಕರು ಸಮನ್ವಯ ಶಾಖೆ	ಖಾಲಿ	––	––

ಕ್ರ ಸಂ.	ಪದನಾಮ	ಅಧಿಕಾರಿ/ನೌಕರರ ಹೆಸರು (ಶ್ರೀಯುತರು)	ದೂರವಾಣಿ ಸಂಖ್ಯೆ ಕಛೇರಿ/ಮನೆ	ಇ–ಮೇಲ್ ವಿಳಾಸ
31	ಜಮೇದಾರ್ / ದಲಾಯತ್ ಸಮನ್ವಯ ಶಾಖೆ	ಖಾಲಿ	––	––
32	ಜಮೇದಾರ್ / ದಲಾಯತ್ ಸಮನ್ವಯ ಶಾಖೆ	ಖಾಲಿ	––	––
33	ಹಿರಿಯ ಬೆರಳಚ್ಚುಗಾರರು ಸಮನ್ವಯ ಶಾಖೆ	ಪ್ರೇಮಕುಮಾರಿ ಎಸ್.	080–22032292	––

4(ಬಿ)(x) ನಷ್ಟ ಪರಿಹಾರ ವ್ಯವಸ್ಥೆಯನ್ನು ಒಳಗೊಂಡಂತೆ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುತ್ತಿರುವ ಮಾಸಿಕ ಗೌರವಧನ :

ಕ್ರ. ಸಂ.	ಪದನಾಮ	ಒಟ್ಟು ವೇತನ ₹.ಗಳಲ್ಲಿ
1	ಡಾ॥ ಬಿ. ಬಸವರಾಜು, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ	2,01,450/–
3	ಶಾಖಾಧಿಕಾರಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ
4	ಮಹಾಜಬೀನ್ ಸೈ. ಮುಲ್ಲಾ ಹಿರಿಯ ಸಹಾಯಕರು, ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ	37,302/–
5	ಶೀಘ್ರಲಿಪಿಗಾರರು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ
6	ದಲಾಯತ್ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ
7	ಬಿ.ಎನ್. ಶ್ರೀನಿವಾಸ ಸರ್ಕಾರದ ಉಪ ಕಾರ್ಯದರ್ಶಿ	66,883/–
8	ಶೀಘ್ರಲಿಪಿಗಾರರು ಉಪ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ
9	ಕಿರಿಯ ಸಹಾಯಕರು ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ
10	ಜಮೇದಾರ್ / ದಲಾಯತ್ ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ
11	ಕೆ.ಬೀರೇಶ್ ಸರ್ಕಾರದ ಅಧೀನ ಕಾರ್ಯದರ್ಶಿ, ಸಾರಿಗೆ ಇಲಾಖೆ	53,520/–
12	ಶೀಘ್ರಲಿಪಿಗಾರರು ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ
13	ಶೋಭಾ ಎಸ್.ವಿ, ಜಮೇದಾರ್, ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ	27,000/–
14	ಎಸ್.ಎಂ. ಕುಂಬಾರ್ ಶಾಖಾಧಿಕಾರಿ, ಸಾರಿಗೆ–1 ಶಾಖೆ	48,308/–
15	ನಾರಾಯಣ ಸ್ವಾಮಿ ಎಸ್. ಹಿರಿಯ ಸಹಾಯಕರು, ಸಾರಿಗೆ–1 ಶಾಖೆ	34,480/–

ಕ್ರ. ಸಂ.	ಪದನಾಮ	ಒಟ್ಟು ವೇತನ ₹.ಗಳಲ್ಲಿ
16	ಸಹಾಯಕರು ಸಾರಿಗೆ–1 ಶಾಖೆ	ಖಾಲಿ
17	ಶಿವಕೇಶವ ಪಿ. ಸಹಾಯಕರು, ಸಾರಿಗೆ–1 ಶಾಖೆ	30,490/–
18	ಮೇರಿ ಸುಪ್ರಿಯ ಕಿರಿಯ ಸಹಾಯಕರು	20,785/–
19	ಆರ್.ದೀಪಾ, ಬೆರಳಚ್ಚುಗಾರರು, ಸಾರಿಗೆ–1 ಶಾಖೆ	20,920/–
20	ದಲಾಯತ್ / ಗ್ರೂಪ್ ಡಿ ಸಾರಿಗೆ–1 ಶಾಖೆ	ಖಾಲಿ
21	ಎಸ್. ನಾಗರಾಜು ಪೀಠಾಧಿಕಾರಿ, ಸಾರಿಗೆ–2 ಶಾಖೆ	42,698/–
22	ಎಸ್.ನಾರಾಯಣಸ್ವಾಮಿ ಹಿರಿಯ ಸಹಾಯಕರು, ಸಾರಿಗೆ–2 ಶಾಖೆ	34,480/–
23	ಗಂಗಾಧರ ಹೆಚ್.ಎಂ. ಸಹಾಯಕರು, ಸಾರಿಗೆ–2 ಶಾಖೆ	27,100/–
24	ಸಹಾಯಕರು ಸಾರಿಗೆ–2 ಶಾಖೆ	ಖಾಲಿ
25	ಶ್ವೇತಾ ಬೆರಳಚ್ಚುಗಾರರು, ಸಾರಿಗೆ–2 ಶಾಖೆ	20,920/–
26	ದಲಾಯತ್/ ಗ್ರೂಪ್–ಡಿ ಸಾರಿಗೆ–2 ಶಾಖೆ	ಖಾಲಿ
27	ಆರ್. ಮಂಜುಳ ಶಾಖಾಧಿಕಾರಿ, ಸ್ವೀಮರ ಶಾಖೆ	40,240/–
28	ಆರ್. ಸರಸ್ವತಮ್ಮ ಸಹಾಯಕರು, ಸಮನ್ವಯ ಶಾಖೆ	27,674/–
29	ಕಿರಿಯ ಸಹಾಯಕ ಸಮನ್ವಯ ಶಾಖೆ	ಖಾಲಿ
30	ಕಿರಿಯ ಸಹಾಯಕ ಸಮನ್ವಯ ಶಾಖೆ	ಖಾಲಿ
31	ಜಮೇದಾರ್ / ದಲಾಯತ್ ಸಮನ್ವಯ ಶಾಖೆ	ಖಾಲಿ
32	ಜಮೇದಾರ್ / ದಲಾಯತ್ ಸಮನ್ವಯ ಶಾಖೆ	ಖಾಲಿ
33	ಪ್ರೇಮಕುಮಾರಿ ಎಸ್. ಹಿರಿಯ ಬೆರಳಚ್ಚುಗಾರ್ತಿ	49,500/–

ಟಿಪ್ಪಣಿ:– ಆಂತರಿಕ ಆರ್ಥಿಕ ಸಲಹೆಗಾರರು (ಐಎಫ್‌ಎ) ಶಾಖೆ ಮತ್ತು ಕಾನೂನು ಮುಖ್ಯ ಶಾಖೆಯ ಸಂಬಂಧದಲ್ಲಿನ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆಯನ್ನು ಗೃಹ ಇಲಾಖೆಯಿಂದ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ.

4(ಬಿ)(xi) ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ; ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:

ಕ್ರ.ಸಂ.	ಸಾರಿಗೆ ಇಲಾಖೆ				
	2015–16 ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ಅನುದಾನದ ವಿವರ				
	ಯೋಜನೆಯ ವಿವರ	ಲೆಕ್ಕ ಶೀರ್ಷಿಕೆ ವಿವರ	ಯೋಜನೆ/ ಯೋಜನೇತರ	ನಿಗದಿತ ಅನುದಾನ	ಬಿಡುಗಡೆಗೊಳಿಸಲಾದ ಮೊತ್ತ
1	ಇತರೆ ಸಾರಿಗೆ ಸೇವೆಗಳು – ಮಾಲಿನ್ಯ ನಿಯಂತ್ರಣ	2041–00–101–0–01–01	ಯೋಜನೆ	**101.00**	**101.00**
2	ಚಾಲಕ ತರಬೇತಿ ಸಂಸ್ಥೆ ಸ್ಥಾಪನೆ	5055–00–050–0–04–04	ಯೋಜನೆ	**801.00**	**801.00**
3		2041–00–800–0–02–02	ಯೋಜನೆ	**500.00**	**500.00**
4	ಪ್ರಾದೇಶಿಕ ಸಾರಿಗೆ ಕಛೇರಿ ಕಟ್ಟಡ ಮತ್ತು ಚಾಲನಾ ಪಥ ನಿರ್ಮಾಣ	4059–80–051–0–34–34	ಯೋಜನೆ	**800.00**	**800.00**
			ಒಟ್ಟು	**2202.00**	**2202.00**

2015–16 ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ಅನುದಾನದ ವಿವರ					
ಕರಾರಸಾಸಂಸ್ಥೆ					
ಯೋಜನೆ			ಯೋಜನೇತರ		
ವಿಶೇಷ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ. ಲಕ್ಷಗಳಲ್ಲಿ)	ಬಿಡುಗಡೆ (ರೂ. ಲಕ್ಷಗಳಲ್ಲಿ)	ವಿವಿಧ ರೀತಿಯ ಬಸ್ ಪಾಸುಗಳು ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ. ಲಕ್ಷಗಳಲ್ಲಿ)	ಬಿಡುಗಡೆ (ರೂ. ಲಕ್ಷಗಳಲ್ಲಿ)
5055–00–190–1–00–133	1500.00	1500.00	3055–00–190–0–06–07–08–09–10–11	23905.00	23905.00
ವಾಕರಾರಸಾಸಂಸ್ಥೆ					
ಯೋಜನೆ			ಯೋಜನೇತರ		
ವಿಶೇಷ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ. ಲಕ್ಷಗಳಲ್ಲಿ)	ಬಿಡುಗಡೆ (ರೂ. ಲಕ್ಷಗಳಲ್ಲಿ)	ವಿವಿಧ ರೀತಿಯ ಬಸ್ ಪಾಸುಗಳು ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ. ಲಕ್ಷಗಳಲ್ಲಿ)	ಬಿಡುಗಡೆ (ರೂ. ಲಕ್ಷಗಳಲ್ಲಿ)
5055–00–190–1–00–133	1500.00	1500.00	3055–00–190–0–04–09–02–07–06–11–08	16198.00	16198.00
ಈಕರಾರಸಾಸಂಸ್ಥೆ					
ಯೋಜನೆ			ಯೋಜನೇತರ		
ವಿಶೇಷ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ. ಲಕ್ಷಗಳಲ್ಲಿ)	ಬಿಡುಗಡೆ (ರೂ. ಲಕ್ಷಗಳಲ್ಲಿ)	ವಿವಿಧ ರೀತಿಯ ಬಸ್ ಪಾಸುಗಳು ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ. ಲಕ್ಷಗಳಲ್ಲಿ)	ಬಿಡುಗಡೆ (ರೂ. ಲಕ್ಷಗಳಲ್ಲಿ)
5055–00–190–2–00–133	1500.00	1500.00	3055–00–190–0–05–09–02–07–06–11–08	12082.00	12082.00

2015–16 ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ಅನುದಾನದ ವಿವರ		
ಬೆಂಮನಸಾಸಂಸ್ಥೆ		
ಯೋಜನೇತರ		
ವಿವಿಧ ರೀತಿಯ ಬಸ್ ಪಾಸುಗಳು ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ. ಲಕ್ಷಗಳಲ್ಲಿ)	ಬಿಡುಗಡೆ (ರೂ. ಲಕ್ಷಗಳಲ್ಲಿ)
3055–00–190–0–03–09–08–07–06–11	19547.00	19547.00

ಡಿಡಿಯುಟಿಟಿಎಲ್		
ಯೋಜನೆ		
ಟ್ರಕ್ ಟರ್ಮಿನಲ್‌ಗಳ ನಿರ್ಮಾಣಕ್ಕಾಗಿ	ಹಂಚಿಕೆ (₹. ಲಕ್ಷಗಳಲ್ಲಿ)	ಬಿಡುಗಡೆ (₹. ಲಕ್ಷಗಳಲ್ಲಿ)
5055–00–050–0–02–386	1.00	1.00
ನರ್ಮ್ (ಸಾರಿಗೆ ಸಂಸ್ಥೆಗಳಿಗೆ)		
ನಗರ ಸಾರಿಗೆಯ ಮೂಲಭೂತ ಸೌಕರ್ಯಗಳಿಗೆ	ಹಂಚಿಕೆ (₹. ಲಕ್ಷಗಳಲ್ಲಿ)	ಬಿಡುಗಡೆ (₹. ಲಕ್ಷಗಳಲ್ಲಿ)
5055–00–800–0–01–132	500.00	500.00

4(ಬಿ)(xii) ಹಂಚಿಕೆ ಮಾಡಲಾದ ಮೊಬಲಗಳನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು:

ಸಾರಿಗೆ ಸಚಿವಾಲಯವು ಯಾವುದೇ ಸಹಾಯಧನ ಕಾರ್ಯಕ್ರಮವನ್ನು ನೇರವಾಗಿ ನಿರ್ವಹಿಸುವುದಿಲ್ಲ. ಆದರೆ ಇದು ಸಹಾಯಧನ ಕಾರ್ಯಕ್ರಮಗಳಿಗೆ ನಿಧಿಗಳನ್ನು ಮಂಜೂರು ಮಾಡುತ್ತದೆ.

4(ಬಿ)(xiii) ನೀಡಿರುವ ರಿಯಾಯಿತಿಗಳನ್ನು, ಪರ್ಮಿಟ್ಟುಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು:

ಸಾರಿಗೆ ಸಚಿವಾಲಯವು ಬಾಬ್ತು ಸಂ. **(xii)** ರಲ್ಲಿ ವಿವರಿಸಲಾದಂತಹ ನಿಧಿಗಳನ್ನು ಮಂಜೂರು ಮಾಡುತ್ತದೆ. ಮೋಟಾರು ವಾಹನಗಳ ಅಧಿನಿಯಮದ ಪ್ರಕಾರ ಮೋಟಾರು ವಾಹನಗಳಿಗೆ ಪರ್ಮಿಟ್ಟುಗಳನ್ನು ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ) ಯಿಂದ ಮಂಜೂರು ಮಾಡಲಾಗುತ್ತದೆ.

4(ಬಿ)(xiv) ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು:

